# ಡಾ. ಸಿ. ಸೋಮಶೇಖರ, ಐಎಎಸ್(ನಿ)
## ವ್ಯಕ್ತಿತ್ವ ಮತ್ತು ಸಾಧನೆ

**ದಿನಾಂಕ 01–12–2013 ರಂದು ಬೆಂಗಳೂರಿನಲ್ಲಿ ಡಾ. ಸಿ. ಸೋಮಶೇಖರ ಅವರಿಗೆ ಅವರ ಅಭಿಮಾನಿ ಬಳಗದಿಂದ ಏರ್ಪಡಿಸಲಾಗಿದ್ದ ಆತ್ಮೀಯ ಅಭಿನಂದನಾ ಸಮಾರಂಭದಲ್ಲಿ ಅವರಿಗೆ ಅರ್ಪಿಸಲಾದ ಅಭಿನಂದನಾ ಸಂಪುಟ 'ಮುತ್ತಿನ ಹಾರ'ದಲ್ಲಿ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಅವರ ಬಗ್ಗೆ ಮೂಡಿಬಂದಿರುವ ಮಹನೀಯರುಗಳ ಮನದುಂಬಿದ ಮಾತುಗಳು.**

ದಕ್ಷ ಆಡಳಿತ ತಜ್ಞರಾಗಿ, ವಾಗ್ಮಿಯಾಗಿ, ಸಾಹಿತಿಯಾಗಿ, ಸಂಸ್ಕೃತಿಯಲ್ಲಿ ಅಪಾರ ಶ್ರದ್ಧೆ ಮತ್ತು ಆಸಕ್ತಿಯನ್ನು ಹೊಂದಿರುವ ಶ್ರೀಯುತರು, ರಾಜ್ಯ, ದೇಶ–ವಿದೇಶಗಳಾದ್ಯಂತ ಆಡಳಿತ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ನೂರಾರು ಪ್ರಬುದ್ಧ ಉಪನ್ಯಾಸಗಳನ್ನು ನೀಡಿ ಜನಮನ್ನಣೆಯನ್ನು ಪಡೆದಿರುವ ನಾಡುನುಡಿ ಸಂಸ್ಕೃತಿಯ ಬಹುದೊಡ್ಡ ಆರಾಧಕರಾಗಿದ್ದಾರೆ. ವಚನಾಧ್ಯಯನ ಮತ್ತು ಶರಣ ಸಾಹಿತ್ಯ ರಚನೆ ಅವರ ವಿಶೇಷವಾದ ಆಸಕ್ತಿಯ ಕ್ಷೇತ್ರಗಳಾಗಿವೆ. ಸಂಘಟನಾ ಚಾತುರ್ಯ ಮತ್ತು ಸ್ನೇಹಪರ ಸಂಬಂಧಗಳೊಂದಿಗೆ ಉನ್ನತವಾದ ಹೆಸರನ್ನು ಪಡೆದಿರುವ ಶ್ರೀಯುತರು ಅತ್ಯುತ್ತಮ ಮಾನವೀಯ ಸಂವೇದನೆ ಮತ್ತು ಪ್ರೀತಿಯ ಸ್ಪರ್ಶದೊಂದಿಗೆ ಜನಮಾನಸದಲ್ಲಿ ಚಿರಸ್ಥಾಯಿಯಾದ ಸ್ಥಾನ ಪಡೆದಿದ್ದಾರೆ. ತಮ್ಮ ಬದುಕನ್ನು ಸಾರ್ವಜನಿಕ ನಿಸ್ವಾರ್ಥ ಸೇವೆಯ ಒಂದು ಮಾರ್ಗವೆಂದು ಭಾವಿಸಿರುವ ಶ್ರೀಯುತರ ವ್ಯಕ್ತಿತ್ವ, ಸಾಮರ್ಥ್ಯ, ಸಾಧನೆಗಳನ್ನು ಪರಿಚಯಿಸುವ ಈ ಒಂದು ಕಿರುಹೊತ್ತಿಗೆ–ನಿಮಗಾಗಿ.



ಡಾ. ಸಿ. ಸೋಮಶೇಖರ, ಐಎಎಸ್(ನಿ) ಹಾಗೂ ಶ್ರೀಮತಿ ಸರ್ವಮಂಗಳಾ



### ಪರಮಪೂಜ್ಯ ಜಗದ್ಗುರು

## ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು

### ಶ್ರೀ ಸಿದ್ಧಗಂಗಾಕ್ಷೇತ್ರ

ವಚನ ಸಾಹಿತ್ಯ ಪ್ರೇಮಿಗಳಾಗಿ, ಸಂಶೋಧಕರಾಗಿ, ಅತ್ಯುತ್ತಮ ಭಾಷಣಕಾರರಾಗಿ, ಸಾಹಿತ್ಯ ಕೃಷಿಕೃತ್ಯ ಕಾಯಕನಿಷ್ಠರಾಗಿ, ವಚನ ಸಾಹಿತ್ಯದ ತಮ್ಮ ಪ್ರೌಢ ಪ್ರಬಂಧಕ್ಕಾಗಿ ಕನ್ನಡ ವಿಶ್ವವಿದ್ಯಾಲಯದಿಂದ 'ಡಿಲಿಟ್' ಪದವಿ ಪಡೆದವರಾಗಿ, ಭಾರತೀಯ ಆಡಳಿತ ಸೇವಾ ಪದವಿಗೆ ರತ್ನಭೂಷಣರಾಗಿ, ನೂರಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕೃತರಾಗಿ, ಅರವತ್ತರ ನವವಸಂತಕ್ಕೆ ಶ್ರೀಕಾರ ಬರೆಯುತ್ತಿರುವ ಶ್ರೀಯುತರು ವಿನಯ ಸೌಜನ್ಯಗಳ ಸದುವಿನಯ ಮೃದುವಚನಗಳ ನಗೆಮುಗುಳ ಸರಸ ಸರಳ ಹೃದಯುವಂತರು. ಶ್ರೀಯುತರಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಿರುವುದು ಶ್ಲಾಘನೀಯವಾದುದಾಗಿದೆ.

'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂಬ ಬಸವಣ್ಣನವರ ಸೊಲ್ಲಿನಂತೆ ಡಾ. ಸಿ. ಸೋಮಶೇಖರ ಅವರು ಎಲ್ಲೆಲ್ಲಿಯೂ ಸಲ್ಲುವಂಥವರು. ಶ್ರೀ ಮಠದ ಅಂತರಂಗದ ಸದ್ಭಕ್ತರು. ಬಸವಾದಿ ಪ್ರಮಥರು ಹಾಗೂ ಶ್ರೀ ಸಿದ್ಧಗಂಗಾ ಗುರುಪರಂಪರೆ ಶ್ರೀಯುತರಿಗೆ ಸಕಲ ಸನ್ಮಂಗಳವನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ. ❑

### ಪರಮಪೂಜ್ಯ ಜಗದ್ಗುರು

## ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು



### ಸುತ್ತೂರು ಶ್ರೀಕ್ಷೇತ್ರ

ಕರ್ನಾಟಕ ಸರ್ಕಾರದಲ್ಲಿ ಮೂರೂವರೆ ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಡಾ. ಸಿ. ಸೋಮಶೇಖರರವರು ದಕ್ಷ ಆಡಳಿತಗಾರರಲ್ಲಿ ಒಬ್ಬರು. ಅನೇಕ ಉನ್ನತ ಹುದ್ದೆಗಳಲ್ಲಿದ್ದು ಜನಮೆಚ್ಚುಗೆ ಗಳಿಸಿದವರು. ಜನಪರ ಕಾರ್ಯಗಳಲ್ಲಿ, ಯೋಜನೆ–ಯೋಚನೆಗಳಲ್ಲಿ ಪ್ರಸನ್ನತೆಯಿಂದ ಸ್ಪಂದಿಸುವ ಬಹುಮುಖ ವ್ಯಕ್ತಿತ್ವವುಳ್ಳವರು. ಬಹುಕಾಲದಿಂದ ಶ್ರೀ ಸುತ್ತೂರು ಮಠದ ಅಭಿಮಾನಿಗಳೂ ಭಕ್ತರೂ ಆದ ಡಾ. ಸೋಮಶೇಖರರವರು ಶರಣಸಾಹಿತ್ಯದಲ್ಲಿ ಅಪಾರ ಆಸಕ್ತಿ ಹೊಂದಿದ್ದು ಹಲವಾರು ಕೃತಿಗಳ ಲೇಖಕರಾಗಿದ್ದಾರೆ. 'ವಚನಗಳಲ್ಲಿ ಸಾಮಾಜಿಕ ಚಿಂತನೆ' ಪ್ರೌಢಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದಿರುವ ಇವರು ತಮ್ಮ ಹರಿತವಾದ ವಿಚಾರಧಾರೆಯಿಂದ ಜನಮನವನ್ನು ತಲುಪುವ ಅಸಾಧಾರಣ ಸಾಮರ್ಥ್ಯವುಳ್ಳ ವಾಗ್ಮಿಗಳು. ವಿದೇಶಗಳಲ್ಲಿ ಹಲವಾರು ಸಮ್ಮೇಳನಗಳಲ್ಲಿ ಭಾಗವಹಿಸಿ ಕನ್ನಡ ಸಾಹಿತ್ಯ–ಸಂಸ್ಕೃತಿಯ ಕಂಪನ್ನು ಪಸರಿಸಿರುವ ಹೆಗ್ಗಳಿಕೆ ಇವರದಾಗಿದೆ. ❑



### ಪರಮಪೂಜ್ಯ ಜಗದ್ಗುರು

## ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು

**ಶ್ರೀಮದ್ರಂಭಾಪುರಿ**

ಡಾ. ಸಿ. ಸೋಮಶೇಖರ ಅವರು ಸರಳ ಸಜ್ಜನಿಕೆಯ ಆದರ್ಶ ಅಧಿಕಾರಿಗಳು. ಧರ್ಮ, ಸಂಸ್ಕೃತಿ ಪರಂಪರೆಗಳ ಅರಿವು ಉಳ್ಳವರು. ಹಲವು ಹತ್ತು ರಂಗದಲ್ಲಿ ಅವರು ಮಾಡಿದ ಕೃಷಿ ಸಾಮಾನ್ಯವಾದುದಲ್ಲ. ನಿರಂತರ ಕ್ರಿಯಾಶೀಲ ಬದುಕಿನಿಂದಾಗಿ ಏನೆಲ್ಲ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಪ್ರಾಪ್ತವಾಗಿವೆ. ಮೂರು ದಶಕಗಳಿಂದ ಮಾಡಿದ ಸೇವೆಯನ್ನು ಎಲ್ಲರೂ ಗುರುತಿಸುವಂತಾಗಿದೆ. ನಾಡು-ನುಡಿಗಳ ಸಂವರ್ಧನೆಗಾಗಿ ಶ್ರಮಿಸಿದ ಅವರ ಬದುಕು ನಿಜವಾಗಲೂ ಸಾರ್ಥಕ. ದಕ್ಷ ಅಧಿಕಾರಿಯಾಗಿ, ಸ್ನೇಹಜೀವಿಯಾಗಿ, ಬಾಳ ಬಾಂಧಳದಲ್ಲಿ ಅವರು ಮೂಡಿಸಿರುವ ಹೆಜ್ಜೆಯ ಗುರುತುಗಳು ಎಂದೆಂದಿಗೂ ಮಾಸಲಾರವು.

ಶ್ರೀಮಠದ ಪರಮ ಭಕ್ತರಾದ ಡಾ. ಸಿ. ಸೋಮಶೇಖರ ಅವರು ಆರೋಗ್ಯವಂತರಾಗಿ ನೂರಾರು ವರುಷ ಬಾಳಿ ಬದುಕಿ ನಾಡಿಗೆ-ಜನತೆಗೆ ಸಂತೋಷ ಉಂಟುಮಾಡಲಿ. ಜನಸಮುದಾಯದಲ್ಲಿ ಭಾರತೀಯ ಸಂಸ್ಕೃತಿ, ಆಚಾರ್ಯರ ಆದರ್ಶ ಮತ್ತು ಶರಣರ ಅರಿವು ಮೂಡಿಸುವ ಮಹತ್ಕಾರ್ಯ ಮಾಡುವಂತಾಗಲಿ. ❑



### ಪರಮಪೂಜ್ಯ ಜಗದ್ಗುರು

## ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು

**ಚಿತ್ರದುರ್ಗ**

ಅವರು ಅಧಿಕಾರದ ದರ್ಪವಿಲ್ಲದೆ ಸಾರ್ವಜನಿಕ ಬದುಕಿನಲ್ಲಿ ತಮ್ಮ ಬದುಕನ್ನು ಹಸನುಗೊಳಿಸಿಕೊಂಡವರು. ಸರಳ, ಸ್ವಾಭಿಮಾನ ಹಾಗೂ ಗೌರವಾನ್ವಿತವಾದ ಜೀವನ ನಡೆಸುತ್ತಿರುವ ಇವರು ಶ್ರೀಮಠದ ಜೊತೆಗೆ ಅನನ್ಯ ಸಂಬಂಧವನ್ನಿಟ್ಟುಕೊಂಡಿದ್ದಾರೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಕರ್ನಾಟಕ ಸರ್ಕಾರದ ಕಾರ್ಯದರ್ಶಿ ಸ್ಥಾನದಿಂದ ಸೇವೆ ಸಲ್ಲಿಸುತ್ತಿರುವ ಇವರ ಸೇವೆ ಅನುಪಮವಾದುದು.

ಶರಣರ ವಿಚಾರಧಾರೆಗಳನ್ನು ಪ್ರಭಾವ-ಪೂರ್ಣವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವುದು ಸಂತೃಪ್ತಿಗೆ ಕಾರಣವಾಗಿದೆ. ಅವರೊಬ್ಬ ಅದ್ವಿತೀಯ ವಾಗ್ಮಿಗಳು ಸರಳ ಸಜ್ಜನಿಕೆಯ ಹಾಗೂ ವಿಶೇಷವಾಗಿ ಸ್ನೇಹಶೀಲ ವ್ಯಕ್ತಿಯಾಗಿ ಬದುಕನ್ನು ನಡೆಸುತ್ತ ಬಂದಿರುವುದು ಸ್ವಾಗತಾರ್ಹ. ಹಲವಾರು ಗೋಷ್ಠಿಗಳು, ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವುದರೊಂದಿಗೆ ತಮ್ಮ ಅಪೂರ್ವ ಜ್ಞಾನವನ್ನು ಸಮಾಜೋದ್ಧಾರಕ್ಕಾಗಿ ಧಾರೆಯೆರೆದವರು. ❑



ಪರಮಪೂಜ್ಯ ಜಗದ್ಗುರು

## ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು

**ತರಳಬಾಳು**

ಡಾ. ಸಿ. ಸೋಮಶೇಖರ ಅವರು ನಾಡು ನುಡಿಗಳಿಗೆ ಸಮರ್ಪಣಾಭಾವದಿಂದ ದುಡಿಯುತ್ತಿರುವ ಕಟ್ಟಾಳು ಕಾರ್ಯಕರ್ತರಾಗಿದ್ದಾರೆ. ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ಉತ್ತರಿಸಿದವರಲ್ಲಿ ಪ್ರಥಮರೆಂಬ ಹೆಗ್ಗಳಿಕೆ ಹಾಗೂ ನಾಡು ನುಡಿಯ ಮೇಲಿನ ಅಭಿಮಾನದಿಂದ ಕೇಂದ್ರ ಪ್ರಥಮದರ್ಜೆ ಸೇವೆಯನ್ನು ನಿರಾಕರಿಸಿದ ದಿಟ್ಟತನ ಅವರದ್ದು.

ಶ್ರೀಮಠದ ಅಭಿಮಾನಿಗಳಾದ ಡಾ. ಸೋಮಶೇಖರ ಅವರಿಗೆ ವಿಶ್ವಬಂಧು ಮರುಳಸಿದ್ಧರು ಹಾಗೂ ಬಸವಾದಿ ಶಿವಶರಣರು ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸಲಿ ಎಂದು ಮನಸಾರೆ ಹಾರೈಸುತ್ತೇವೆ. ❑

ಪರಮಪೂಜ್ಯ ಜಗದ್ಗುರು

## ಶ್ರೀ ಮ.ನಿ.ಪ್ರ. ಶ್ರೀ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು



**ಸಿದ್ಧಗಂಗಾಮಠ**

'ಎಲ್ಲ ಎಲ್ಲವನರಿದು ಫಲವೇನಯ್ಯಾ ತನ್ನ ತಾನರಿಯಬೇಕಲ್ಲವೆ...?' ಎಂಬ ಅಕ್ಕಮಹಾದೇವಿಯವರ ವಚನದ ಅಂತರಾರ್ಥವನ್ನರಿತು ನಡೆದು ಬಂದ ಶ್ರೀ ಸೋಮಶೇಖರರು ಸ್ನೇಹಪರರು, ಮೃದುಭಾಷಿಗಳು, ನಗುಮುಖದ ಶಾಂತಸ್ವಭಾವದವರು, ಶ್ರೀಮಠದೊಡನೆ ಅವಿನಾಭಾವಿಗಳಾಗಿ ಸಭೆಸಮಾರಂಭಗಳಲ್ಲಿ ಭಾಗಿಗಳಾಗುತ್ತಿರುವ ಸಹೃದಯಿಗಳು. ವಚನ ಸಾಹಿತ್ಯಾಧ್ಯಯನನಿಷ್ಠರು, ಶ್ರೀಯುತರು ನಡೆದು ಬಂದಿರುವ ದಾರಿ ವೈವಿಧ್ಯಪೂರ್ಣವಾದುದು. ಅಧಿಕಾರಿಗಳಾಗಿ, ಆತ್ಮೀಯ ಬಂಧುಗಳಾಗಿ, ಗೆಳೆತನದ ಸಿರಿಗಂಧವಾಗಿ, ಸಂಘ–ಸಂಸ್ಥೆಗಳ ಪ್ರಾಣ–ಜೀವಾಳವಾಗಿ, ಅಸ್ಖಲಿತ ಭಾಷಣಕಾರರಾಗಿ, 'ಎನಗಿಂತ ಕಿರಿಯರಿಲ್ಲ' ಎಂಬ ಬಸವಣ್ಣನವರ ಮಾತನ್ನು ನುಡಿನಡೆಗಳಲ್ಲಿ ತುಂಬಿಕೊಂಡು, ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿ, ಸದ್ಗೃಹಸ್ಥರಾಗಿ, ಆಚಾರಕ್ಕರಸಾಗಿ, ನೀತಿಗೆ ಪ್ರಭುವಾಗಿ, ಮಾತಿನಲಿ ಚೂಡಾಮಣಿಯಾಗಿರುವವರು. ಶರಣ ಡಾ. ಸಿ. ಸೋಮಶೇಖರ ಅವರಿಗೆ ಬಸವಾದಿ ಶರಣರು ಹಾಗೂ ಸಿದ್ಧಗಂಗಾ ಗುರುಪರಂಪರೆ ಸಕಲ ಸನ್ಮಂಗಳವನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ. ❑



## ಪರಮಪೂಜ್ಯ ಜಗದ್ಗುರು

# ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು

ಗದಗ

ಡಾ. ಸಿ. ಸೋಮಶೇಖರ ಕರ್ನಾಟಕ ಸರಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಓರ್ವ ದಕ್ಷ ಹಾಗೂ ಜನಪ್ರಿಯ ಅಧಿಕಾರಿ. ಇವರ ಅಭಿಮಾನಿಗಳ ಬಳಗ ಕರ್ನಾಟಕದ ತುಂಬ ಪಸರಿಸಿದೆ. ಕಳೆದ ಮೂರೂವರೆ ದಶಕಗಳಿಂದ ಸರಕಾರದ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ತಮ್ಮ ದಕ್ಷತೆ ಹಾಗೂ ಕ್ರಿಯಾಶೀಲತೆಯಿಂದ ತಾವು ಸೇವೆ ಸಲ್ಲಿಸಿದ ಇಲಾಖೆಗಳಿಗೆ ಗೌರವ ತಂದುಕೊಟ್ಟಿದ್ದಾರೆ.

ಉನ್ನತ ನಾಗರಿಕರೂ, ಪ್ರತಿಷ್ಠಿತ ಹುದ್ದೆಗಳನ್ನು ಅತಿ ಜವಾಬ್ದಾರಿಯಿಂದ ನಿಭಾಯಿಸಿದವರೂ, ಕರ್ತವ್ಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡವರೂ, ಜನತೆಯ ನಾಡಿ ಮಿಡಿತವನ್ನು ಚನ್ನಾಗಿ ಅರಿತುಕೊಂಡವರೂ, ನಾಡು, ನುಡಿ, ಕಲೆ, ಸಾಹಿತ್ಯ, ಧರ್ಮ, ಸಮಾಜ, ಸಂಸ್ಕೃತಿಯನ್ನು ಸರಿಯಾಗಿ ತಿಳಿದುಕೊಂಡವರೂ, ಸರ್ವಾದರಣೀಯರೂ ಆಗಿರುವ ಡಾ. ಸಿ. ಸೋಮಶೇಖರ ನಮ್ಮ ನಾಡಿನ ಸತ್ಪುತ್ರರು. ❏

## ಪರಮಪೂಜ್ಯ ಜಗದ್ಗುರು

# ಶ್ರೀ ಮ.ನಿ.ಪ್ರ. ಡಾ. ಮಹಾಂತ ಸ್ವಾಮಿಗಳವರು



ಇಲಕಲ್ಲ

ಡಾ. ಸಿ. ಸೋಮಶೇಖರ ಅವರು ಈ ನಾಡಿನ ಪರಮಚೇತನ. ಅವರ ಉತ್ಸಾಹ, ಕಾರ್ಯಶೈಲಿ, ನಿರಂತರ ಪರಿಶ್ರಮ ಮತ್ತು ಕೆಲಸದ ಮೇಲೆ ಅವರ ಶ್ರದ್ಧೆ ಮತ್ತು ನಿಷ್ಠೆ ಈ ನಾಡಿನ ಯುವಕರಿಗೆ ಮಾರ್ಗದರ್ಶಕವಾಗಿವೆ.

ಸರಕಾರಿ ಸೇವಕರಾಗಿ ಅತ್ಯುನ್ನತ ಪದವಿಗೇರಿದರೂ ಅವರ ಸಾಮಾಜಿಕ ಕಾಳಜಿ, ಬಡವರ ಮೇಲಿನ ಕರುಣೆ, ಉಳಿದ ಅಧಿಕಾರಿಗಳಿಗೆ ಮಾದರಿಯಾಗಿದೆ. ಕರುಣೆ, ಪ್ರೀತಿ, ಸ್ನೇಹ ಎಂಬ ತತ್ವಗಳ ಮೂಲಕವೇ, ಇಂದು ನಾಡಿನಲ್ಲಿ ಶ್ರೀ ಸೋಮಶೇಖರ ಸಾಹೇಬರು ಗುರುತಿಸಿಕೊಂಡಿದ್ದಾರೆ. ಆಡಳಿತದಲ್ಲಿ ಡಾ. ಸಿ. ಸೋಮಶೇಖರ ಅವರು ದಕ್ಷತೆ ಪ್ರಾಮಾಣಿಕತೆಯಿಂದ ಇಂದು ಇತಿಹಾಸವಾಗುತ್ತಾರೆ. ವಚನ ಸಾಹಿತ್ಯವು ಅವರ ಉಸಿರಾಗಿದೆ. ಭಾಷಣ ಕಲೆ ಅವರಿಗೆ ದೈವದತ್ತವಾಗಿ ಬಂದಿದೆ. ಇವರ ಮಾರ್ಗದರ್ಶನ ನಮ್ಮ ಸಮಾಜದ ಅನಿವಾರ್ಯವಾಗಿದೆ. ಇವರಿಗೆ ಬಸವಾದಿ ಶರಣರ ಕೃಪೆಯಿಂದ ದೀರ್ಘ ಆಯುಷ್ಯ ಮತ್ತು ಉತ್ತಮ ಆರೋಗ್ಯ ದೊರೆಯಲಿ ಎಂದು ಹೃದಯಾರೆ ಹಾರೈಸುತ್ತೇವೆ. ❏



ಪರಮಪೂಜ್ಯ ಜಗದ್ಗುರು

## ಡಾ. ಬಸವಲಿಂಗ ಪಟ್ಟದೇವರು

ಹಿರೇಮಠ ಸಂಸ್ಥಾನ, ಭಾಲ್ಕಿ

ಸಾವಿರ ಸಾವಿರ ಸಂಖ್ಯೆಯಲ್ಲಿ ಜಿಲ್ಲಾಧಿಕಾರಿಗಳನ್ನು, ದೊಡ್ಡ ಅಧಿಕಾರಿಗಳನ್ನು ನೋಡುತ್ತೇವೆ. ಅವರೆಲ್ಲರಿಗೂ ಭಿನ್ನರಾಗಿ ನಾಡಿನುದ್ದಕ್ಕೂ ತಮ್ಮದೇ ಛಾಪು ಮೂಡಿಸಿದ ನಡೆ–ನುಡಿ ಒಂದಾಗಿಸಿದ ಏಕೈಕ ಉನ್ನತ ಅಧಿಕಾರಿ ಜಿಲ್ಲಾಧಿಕಾರಿ ಡಾ.ಸಿ.ಸೋಮಶೇಖರರು. ಮೇಲಿನ ಉರಿಲಿಂಗದೇವರ ವಚನದ ಸಾಲು ಸಾಲುಗಳಲ್ಲಿ ಇವರ ವ್ಯಕ್ತಿತ್ವ ಅಡಗಿದೆ.

ಕರ್ನಾಟಕದಲ್ಲಿ ದೊಡ್ಡ ಹುದ್ದೆಯಲ್ಲಿ ಇರುವುದು ಸಾವಿರ ಸಂಖ್ಯೆಯಲ್ಲಿ ಇರಬಹುದು, ಜಿಲ್ಲಾಧಿಕಾರಿಗಳು ಇರಬಹುದು. ಆದರೆ ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ವಚನದಂತೆ ಬದುಕಿ ತೋರಿದ "ವಚನಗಳಲ್ಲಿ ಸಾಮಾಜಿಕ ಚಿಂತನೆ" ಎನ್ನುವ ಅಮೂಲ್ಯ ಗ್ರಂಥ ರಚಿಸಿ ಡಾಕ್ಟರೇಟ್ ಪದವಿ ಪಡೆದ ಏಕೈಕ ಜಿಲ್ಲಾಧಿಕಾರಿ ಡಾ.ಸಿ.ಸೋಮಶೇಖರ ಅವರು ಎಂಬುದನ್ನು ಹೆಮ್ಮೆಯಿಂದ ಹೇಳಬಯಸುವೆವು. ❑



ಪರಮಪೂಜ್ಯ ಜಗದ್ಗುರು


## ಶ್ರೀ ಶ್ರೀ ಡಾ. ಶಾಂತವೀರ ಸ್ವಾಮೀಜಿಗಳು

ಶ್ರೀ ಕೊಳದಮಠ ಮಹಾಸಂಸ್ಥಾನ, ಬೆಂಗಳೂರು

ಡಾ. ಸಿ. ಸೋಮಶೇಖರರಿಗೂ ನಮಗೂ ನಾಲ್ಕು ದಶಕಗಳಷ್ಟು ದೀರ್ಘ ಕಾಲದ ಸಂಬಂಧ. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುವಾಗಲೇ ನಮ್ಮಲ್ಲಿ ಭಾಷಣ, ಉಪನ್ಯಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಶ್ರೀಯುತರು, ವಿದ್ಯಾರ್ಥಿ ದೆಸೆಯಲ್ಲಿಯೇ ಅಪಾರ ಪ್ರತಿಭಾವಂತರಾಗಿದ್ದರು. ನಮ್ಮ ನೇತೃತ್ವದಲ್ಲಿ ಶ್ರೀಮಠದಲ್ಲಿ ನಡೆಯುತ್ತಿದ್ದ ಎಲ್ಲ ಕಾರ್ಯಕ್ರಮಗಳಲ್ಲಿಯೂ ಅವರೇ ಹತ್ತಾರು ವರುಷಗಳ ಕಾಲ ನಿಯಮಿತವಾಗಿ ಉಪನ್ಯಾಸ ಮಾಡುತ್ತಿದ್ದರು, ಕಾರ್ಯಕ್ರಮಗಳನ್ನು ನಿರೂಪಿಸುತ್ತಿದ್ದರು.

ಮುಂದೆ ತಾವೊಬ್ಬ ದೊಡ್ಡ ಅಧಿಕಾರಿಯಾಗಿ ಔನ್ನತ್ಯಕ್ಕೇರಿದರೂ ನಮ್ಮೊಂದಿಗೆ ಮತ್ತು ನಮ್ಮ ಮಠದೊಂದಿಗೆ ಎಂದಿನ ಭಕ್ತಿ ಗೌರವಗಳನ್ನೇ ಇರಿಸಿಕೊಂಡಿದ್ದಾರೆ. ಇದು ಸಂತೋಷದ ವಿಷಯವಾಗಿದೆ. ❑

ಪರಮಪೂಜ್ಯ ಜಗದ್ಗುರು



## ಶ್ರೀ ಶ್ರೀ ಶಿವರುದ್ರ ಮಹಾಸ್ವಾಮಿಗಳು

**ಶ್ರೀ ಬೇಲಿ ಮಠ, ಬೆಂಗಳೂರು**

ಜನಪರ ಕಾಳಜಿಯ ಹೃದಯವಂತಿಕೆಯನ್ನು ಬದುಕಿನುದ್ದಕ್ಕೂ ಜತನದಿಂದ ಕಾಯ್ದುಕೊಂಡು ಎಲ್ಲರೊಳಗೊಂದಾಗಿ, ಎಲ್ಲರಿಗೆ ಬೇಕಾಗಿ ಸರ್ವರಲ್ಲಿಯೂ ಅಹುದಹುದೆನಿಸಿಕೊಂಡವರು ಡಾ. ಸಿ. ಸೋಮಶೇಖರ ಅವರು. ತಮ್ಮ ವಿದ್ಯಾಭ್ಯಾಸದ ಕಾಲದಿಂದಲೂ ಎಲ್ಲರ ಗೆಳೆತನಕ್ಕೆ ಹಿಗ್ಗಿ ಹಾರೈಸುವ ಸ್ನೇಹದ ಸಿರಿಯ ಬದುಕಿನ ಅವರು ಯಾವ ಕಾಲದಲ್ಲಿಯೂ ತನ್ನ ಸ್ಥಿಮಿತವನ್ನು ಕಳೆದುಕೊಳ್ಳದ ಸಾರ್ವಜನಿಕ ಜವಾಬ್ದಾರಿಯ ನಿರ್ವಹಣೆಯ ಸಮಯದಲ್ಲಿಯೂ ಅಧ್ಯಯನ ಸಂಸ್ಕಾರವನ್ನು ಮರೆಯದೆ ಅನನ್ಯತೆಯನ್ನು ಮೆರೆದಿರುವ ಡಾ. ಸಿ. ಸೋಮಶೇಖರ ಅವರ ಬದುಕು ಈ ಹಾದಿಯ ಪಯಣಿಗರಿಗೆ ದಾರಿದೀಪವಾಗುವುದರಲ್ಲಿ ಸಂದೇಹವಿಲ್ಲ.

ಶ್ರೀಮಠದ ಅಭಿಮಾನಿಗಳಾದ ಈ ಅದ್ವಿತೀಯ ಸಾಧಕ ಸೋಮಶೇಖರ ಅವರು ತಮ್ಮ 60 ವರ್ಷಗಳ ಅನುಭವಗಳನ್ನು ಒಟ್ಟುಗೂಡಿಸಿಕೊಂಡು ಮುಂದಿನ ಸಾಧನೆಗೆ ನಾಂದಿ ಹಾಡುವಲ್ಲಿ ಈ ಅಭಿನಂದನೆ ಮಂಗಳ ಧ್ವನಿಯಾಗಿ ಅನುರಣಿಸಲಿ ಎಂದು ಮನಸಾ ಹಾರೈಸುತ್ತೇವೆ.

❑

ಪರಮಪೂಜ್ಯ ಜಗದ್ಗುರು



## ಡಾ. ಶ್ರೀ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳವರು

**ಶ್ರೀ ಹಿರೇಮಠಾಧ್ಯಕ್ಷರು, ತುಮಕೂರು**

ಡಾ. ಸಿ. ಸೋಮಶೇಖರ ಅವರದು ವಿಭಿನ್ನ ಮತ್ತು ವಿಶಿಷ್ಟ ವ್ಯಕ್ತಿತ್ವ. ಅವರು ಬಹುಮುಖ ಪ್ರತಿಭೆಯ ಒಂದು ಬಹುದೊಡ್ಡ ಮೊತ್ತ. ವೃತ್ತಿಯಿಂದ ಐ.ಎ.ಎಸ್. ಅಧಿಕಾರಿಯಾಗಿ ಸರಕಾರದ ಬೇರೆ ಬೇರೆ ಇಲಾಖೆಗಳಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಲಿದ್ದರೂ ಪ್ರವೃತ್ತಿಯಿಂದ ಅವರು ಈ ನಾಡು ಕಂಡ ಓರ್ವ ಅಪರೂಪದ ಸಾಹಿತಿ ಮತ್ತು ಕವಿ, ವಚನ ಸಾಹಿತ್ಯ, ದಾಸಸಾಹಿತ್ಯ ಹಾಗೂ ಕನ್ನಡ ನಾಡಿನ ಯಥಾವತ್ ಚರಿತ್ರೆಯನ್ನು ಆತ್ಮಸಾತ್‌ಗೊಳಿಸಿಕೊಂಡಿರುವ ಅವರಿಗೆ ಯಾವುದೇ ವಿಷಯವನ್ನು ಕೊಟ್ಟರೂ ಸರಿ, ಆ ಕುರಿತು ಅಧಿಕೃತವಾಗಿ ಮಾತನಾಡುವ ತಾಕತ್ತಿದೆ. ಅವರು ಮಾತಿನಲ್ಲಿ ಎಲ್ಲರನ್ನೂ ಕಟ್ಟಿಹಾಕುತ್ತಾರೆ. ಅವರು ಮಾತನಾಡಲು ನಿಂತರೆ ಅವರ ಮಾತುಗಳ ತುಂಬೆಲ್ಲ ವಚನಗಳು ಮತ್ತು ವಚನ ಸಾಹಿತ್ಯವದು ಓತಪ್ರೋತವಾಗಿ ತುಂಬಿಕೊಂಡಿರುತ್ತದೆ.

❑



### ಪರಮಪೂಜ್ಯ ಜಗದ್ಗುರು

## ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ

**ಬಸವ ಮಂಟಪ, ಬೆಂಗಳೂರು**

**ದಕ್ಷ ಆಡಳಿತಗಾರ :** ವಿವಿಧ ಹಂತಗಳಲ್ಲಿ ಹಾಯ್ದು ಬಂದು ಇಂದು ಉನ್ನತ ಹುದ್ದೆಗೆ ಏರಿದ್ದಾರೆ. ಕೆ.ಎ.ಎಸ್. ಓದಿ ತಮ್ಮ ಪ್ರತಿಭೆ–ಪಾಂಡಿತ್ಯ–ದಕ್ಷ ಆಡಳಿತದಿಂದ ಉನ್ನತ ಸ್ಥಾನ ಹೊಂದುತ್ತ ಐ.ಎ.ಎಸ್. ದರ್ಜೆಗೆ ಏರಿದರು. ಯಾವುದೇ ಹುದ್ದೆಯಲ್ಲಿರಲಿ ಅಲ್ಲಿ ತಮ್ಮ ಕಾಯಕ ಪ್ರತಿಭೆ ಪ್ರದರ್ಶಿಸಿ ಕೀರ್ತಿ ಪಡೆದಿದ್ದಾರೆ.

**ಉತ್ತಮ ವಾಗ್ಮಿ :** ಸಾಮಾನ್ಯವಾಗಿ ಎಲ್ಲರಲ್ಲೂ ಪ್ರತಿಭೆ ಇರುವುದಿಲ್ಲ. ಡಾ. ಸೋಮಶೇಖರ ಅವರು ಅಪೂರ್ವ ಪ್ರತಿಭಾವಂತರು. ಅವರ ಕಂಠಶ್ರೀ ಘಂಟಾನಾದದಂತೆ. ಭಾಷಣಕ್ಕೆ ನಿಲ್ಲುತ್ತಿದ್ದಂತೆಯೇ ಅವರ ಅಸ್ಖಲಿತವಾಣಿಯಿಂದ ಜನರನ್ನು ಆಕರ್ಷಿಸುತ್ತಾರೆ. ಕೇಳುಗರನ್ನು ತಮ್ಮತ್ತ ಸೆಳೆದುಕೊಂಡು ಮಂತ್ರಮುಗ್ಧರನ್ನಾಗಿಸುತ್ತಾರೆ. ವೇದಿಕೆಯ ಮೇಲೆ ಅವರು ಉಪಸ್ಥಿತರಿದ್ದರೆ ಆ ವೇದಿಕೆಗೆ ಒಂದು ಮಹತ್ವ ಬರುತ್ತದೆ. ಬರೀ ಧ್ವನಿ ಶಕ್ತಿಯೊಂದೇ ಆಕರ್ಷಣೀಯವಲ್ಲ. ಆ ಮಾತುಗಳ ವಾಹಿನಿಯಲ್ಲಿ ನಿರರ್ಗಳವಾಗಿ ಜ್ಞಾನಗಂಗೆ ಹರಿಯುತ್ತಾಳೆ. ಸುಂದರವಾದ ರೇಷ್ಮೆ ಸೀರೆಯಲ್ಲಿ ಜರಿಯ ಬುಟ್ಟಾಗಳು ಇರುವಂತೆ ಅವರ ನಿರರ್ಗಳ ವಾಗ್ಝರಿಯಲ್ಲಿ ವಚನಗಳು ಸುಂದರ ಬುಟ್ಟಾದಂತೆ ಸಂಭ್ರಮಿಸುತ್ತ ಮನಸ್ಸಿಗೆ ಮುದ ನೀಡುತ್ತವೆ. ಸಂದರ್ಭಕ್ಕೆ ತಕ್ಕಂತಹ ವಚನಗಳು ನುಡಿದರೆ ಮುತ್ತಿನ ಹಾರವಾಗಿ ಕಂಗೊಳಿಸುತ್ತವೆ. ಕಾಲೇಜು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಭಾಗವಹಿಸಿದ ಸ್ಪರ್ಧೆಗಳು, ಗೆದ್ದ ಬಹುಮಾನಗಳು ಅಸಂಖ್ಯಾತ. ❑


### ಪರಮಪೂಜ್ಯ ಜಗದ್ಗುರು

## ಶ್ರೀ ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರ ಮಹಾಸ್ವಾಮಿಗಳು



**ಮೂರುಸಾವಿರ ಮಠ, ಹುಬ್ಬಳ್ಳಿ**

ಧರ್ಮ, ಸಂಸ್ಕೃತಿ, ಸಾಹಿತ್ಯದ ಅಭಿವೃದ್ಧಿಗೆ ಶ್ರಮಿಸಿದವರಲ್ಲಿ ಡಾ. ಸಿ. ಸೋಮಶೇಖರರವರು ಒಬ್ಬ ಶ್ಲಾಘನೀಯ ವ್ಯಕ್ತಿ. ಶ್ರೀಯುತರು ಒಬ್ಬ ಬಹುಮುಖ ಪ್ರತಿಭಾವಂತ ವ್ಯಕ್ತಿ. ಏಕೆಂದರೆ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗಳಾಗಿ, ಕನ್ನಡ ಸಂಸ್ಕೃತಿ ಇಲಾಖೆಯ ಅಧಿಕಾರಿಗಳಾಗಿ, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ, ತುಮಕೂರು ಜಿಲ್ಲಾಧಿಕಾರಿಗಳಾಗಿ, ಅಬಕಾರಿ ಇಲಾಖೆಯ ಅಧಿಕಾರಿಗಳಾಗಿ ಹೀಗೆ ಕಳೆದ ಮೂರೂವರೆ ದಶಕಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಇವರು ಇನ್ನುಳಿದ ಉನ್ನತ ಅಧಿಕಾರಿಗಳಿಗೆ ಆದರ್ಶಪ್ರಿಯರಾಗಿರುವುದು ನಮಗೆ ಅತ್ಯಂತ ಹೆಮ್ಮೆಯನ್ನುಂಟುಮಾಡಿದೆ. ❑



### ಪರಮಪೂಜ್ಯ ಜಗದ್ಗುರು

## ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

**ಶ್ರೀ ತರಳಬಾಳು ಜಗದ್ಗುರು ಶಾಖಾಮಠ, ಸಾಣೇಹಳ್ಳಿ-577515**

ಡಾ. ಸಿ.ಸೋಮಶೇಖರ ಅವರು ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಧಿಕಾರಿಗಳಾಗಿ, ಜಿಲ್ಲಾಧಿಕಾರಿಗಳಾಗಿ ಅತ್ಯುತ್ತಮ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ನಮಗೆ ಅವರು ಪರಿಚಿತವಾದುದು ಅಧಿಕಾರಿಗಳಾಗಿ ಅಲ್ಲ; ಶರಣ ಸಂಸ್ಕೃತಿಯನ್ನು ಜನರ ಮನಮುಟ್ಟುವ ಹಾಗೆ ಬೋಧಿಸುವ ಒಬ್ಬ ಉಪನ್ಯಾಸಕರಾಗಿ. ಅವರದು ಕಂಚಿನ ಕಂಠ. ಅಸ್ಖಲಿತ ವಾಣಿ. ಅಪಾರ ಶಬ್ದಸಂಪತ್ತನ್ನುಳ್ಳ ಅವರು ಮಾತಿಗೆ ನಿಂತರೆ ದಾರಿಯಲ್ಲೆಲ್ಲೋ ಹೋಗುತ್ತಿದ್ದವರು ಸಹ ಒಂದು ಕ್ಷಣ ನಿಂತು ಅವರ ಮಾತನ್ನು ಕೇಳುವ ಉತ್ಸಾಹ ತೋರುವರು. ಪುಂಖಾನುಪುಂಖವಾಗಿ ಶರಣರ ವಚನಗಳ ಉದಾಹರಣೆಯನ್ನು ತಮ್ಮ ಮಾತುಗಳಲ್ಲಿ ನೀಡುವರು. ಮಾತಿಗೆ ಎಲ್ಲೂ ಅಡೆತಡೆ, ವಿಚಾರಗಳ ಗೊಂದಲ ಇಲ್ಲದಂತೆ ಬರವಣಿಗೆಯ ಶೈಲಿಯಲ್ಲೇ ಮಾತನಾಡುತ್ತ ಹೋಗುವರು. ಅವರ ಮಾತುಗಳನ್ನು ನಮ್ಮ ತರಳಬಾಳು ಹುಣ್ಣಿಮೆಗಳಲ್ಲಿ, ಸಾಣೇಹಳ್ಳಿಯ ವಿವಿಧ ಕಾರ್ಯಕ್ರಮಗಳಲ್ಲಿ ಆಲಿಸಿ ಸಂತೋಷಪಟ್ಟಿದ್ದೇವೆ. ಹಾಗಂತ ಅವರು ಕೇವಲ ಮಾತುಗಾರರು, ಕೆಲಸಗಾರರಲ್ಲ ಎಂದು ಭಾವಿಸಬೇಕಾಗಿಲ್ಲ. ಮಾತಿನಷ್ಟೇ ದಕ್ಷತೆಯಿಂದ ತಮ್ಮ ಕಾರ್ಯ ನಿರ್ವಹಿಸುವ ಛಾತಿಯೂ ಅವರಲ್ಲಿದೆ. ❑

### ಪರಮಪೂಜ್ಯ ಜಗದ್ಗುರು

## ಸ್ವಾಮಿ ವಿವೇಕಾನಂದ ಸರಸ್ವತಿ ಸ್ವಾಮೀಜಿ

**ರಾಮಕೃಷ್ಣ - ವಿವೇಕಾನಂದ ಆಶ್ರಮ, ತುಮಕೂರು**



ಡಾ. ಸಿ. ಸೋಮಶೇಖರ್‌ರವರನ್ನು ನಾನು ಹಲವಾರು ವರ್ಷಗಳಿಂದ ಬಲ್ಲೆ. ವಿದ್ಯಾರ್ಥಿಯಾಗಿದ್ದಾಗಿನಿಂದ ಅಪ್ರತಿಮ ಪ್ರತಿಭಾವಂತ, ಬಾಲ್ಯದಲ್ಲಿ ಎದುರಾದ ಸಮಸ್ಯೆಗಳನ್ನು ಸವಾಲಾಗಿ ಪರಿವರ್ತಿಸಿಕೊಂಡು ಪರಿಶ್ರಮದಿಂದ ಸಾಧನೆಗೈದ ಧೀಮಂತ ವ್ಯಕ್ತಿ ಅವರು. ಎಲ್ಲ ವ್ಯಕ್ತಿಗಳೊಂದಿಗೆ ಸ್ನೇಹಪರತೆಯಿಂದ ವ್ಯವಹರಿಸಿ ಅವರುಗಳ ಮನ ಗೆಲ್ಲುವ ಹೃದಯವಂತಿಕೆಯೂ ಅವರದ್ದು. ಯಾವುದೇ ವ್ಯಕ್ತಿಯನ್ನು ಅವರು ನಿರ್ಲಕ್ಷಿಸಿಲ್ಲ, ಅವರ ಬಗ್ಗೆ ಉದಾಸೀನ ಪ್ರವೃತ್ತಿ ಪ್ರದರ್ಶಿಸಿಲ್ಲ! ಅವರ ಪ್ರೀತಿ ವಿಶ್ವಾಸದ ದಿನಚರಿಯು ಪುಸ್ತಕದಲ್ಲಿ ಅಸಂಖ್ಯಾತ ಜನರಿದ್ದಾರೆ. ಅವರೊಬ್ಬ ಅಪೂರ್ವ ಸ್ನೇಹಜೀವಿ ಎಂಬುದಕ್ಕೆ ಇದೊಂದು ವಿಶೇಷ ಅಂಶವಾಗಿದೆ.

ನಮ್ಮ ಪೂರ್ವಾಶ್ರಮದ ವಿದ್ಯಾರ್ಥಿದೆಸೆಯಲ್ಲಿ ನಾವು ಭಾಗವಹಿಸುತ್ತಿದ್ದ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಲು ಡಾ. ಸಿ. ಸೋಮಶೇಖರ್ ಅವರೇ ನಮಗೆ ಸ್ಫೂರ್ತಿಚೇತನರಾಗಿದ್ದರು ಎಂಬುದು ಸ್ತುತ್ಯರ್ಹ ಸಂಗತಿಯಾಗಿದೆ. ❑



## ಡಾ. ರಾಜ್‌ಕುಮಾರ್

ಶ್ರೀ ಸಿ. ಸೋಮಶೇಖರ ಅವರು ತುಂಬಾ ವರ್ಷಗಳ ಹಿಂದೆಯೇ ಮಂಗಳೂರಿನಲ್ಲಿ ಅಧಿಕಾರಿಯಾಗಿದ್ದಾಗ ಅಲ್ಲಿನ ನಮ್ಮದೊಂದು ಸಂಗೀತ ಸಂಜೆಯ ಪೊಲೀಸ್ ಸಹಾಯಾರ್ಥ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಬಂದು ಆಡಿದ ಕನ್ನಡದ ಮಾತುಗಳನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು.

ಕನ್ನಡ ಭಾಷೆಯ ಬಹುದೊಡ್ಡ ಆರಾಧಕರಾಗಿರುವ ಸಿ. ಸೋಮಶೇಖರ ಅವರನ್ನು ನಂತರದಲ್ಲಿ ಹಲವಾರು ಬಾರಿ ವಿಶೇಷವಾಗಿ ಭೇಟಿಯಾಗಿದ್ದೇನೆ, ಮಾತನಾಡಿದ್ದೇನೆ, ಸಂತೋಷಪಟ್ಟಿದ್ದೇನೆ.

ಒಬ್ಬ ಸರ್ಕಾರಿ ಅಧಿಕಾರಿ ಎಂದಾಕ್ಷಣ ಕನ್ನಡ ಮಾತನಾಡುವುದು ಅವಮಾನವೇ ಎಂಬ ಭಾವನೆ ಎಲ್ಲಾ ಕಡೆ ಸಾಮಾನ್ಯವಾಗಿರುವಾಗ ತಮ್ಮ ಇಡೀ ವ್ಯವಹಾರವನ್ನು, ಸೇವೆಯನ್ನು ಅತ್ಯಂತ ಸರಳವಾಗಿ, ಸಹಜವಾಗಿ ಕನ್ನಡದಲ್ಲಿಯೇ ಮಾತನಾಡುವ ಮೂಲಕ ನಾನು-ನುಡಿಗೆ ಅಪಾರ ಕೀರ್ತಿ ತಂದಿರುವ ಡಾ. ಸಿ. ಸೋಮಶೇಖರ ಅವರ ಈ ಯಶಸ್ಸಿಗೆ ಈ ಕನ್ನಡ ಪ್ರೇಮವು ಒಂದು ಮಹತ್ತರ ಕಾರಣ ಎನ್ನುವುದರಲ್ಲಿ ಅನುಮಾನವಿಲ್ಲ.

ಕನ್ನಡ ಭಾಷೆಗಷ್ಟೇ ಅಲ್ಲದೆ ಕನ್ನಡ ಕಲೆ ಮತ್ತು ಸಂಸ್ಕೃತಿಗೂ ಅಪಾರ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ನಮ್ಮ ನಾಡಿನ ಒಬ್ಬ ಮಾದರಿ ಅಧಿಕಾರಿಯಾಗಿದ್ದು ಅವರ ಈ ಆದರ್ಶ ಬೇರೆಲ್ಲರಿಗೂ ಸ್ಫೂರ್ತಿಯಾಗಬೇಕು. ನಾಡಿನ ಎಲ್ಲ ವಲಯಗಳಲ್ಲಿ ಕನ್ನಡವೇ ಸಾರ್ವಭೌಮವಾಗಬೇಕು. ಇದೇ ನಮ್ಮ ಅಭೀಪ್ಸೆ.


## ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ



ಡಾ. ಸಿ. ಸೋಮಶೇಖರ ಅವರನ್ನು ವಿದ್ಯಾರ್ಥಿ ದೆಸೆಯಿಂದಲೂ ನಾನು ಬಲ್ಲೆ. ವಾಣಿಜ್ಯ ಸ್ನಾತಕೋತ್ತರ ವಿದ್ಯಾರ್ಥಿಯಾಗುವ ವೇಳೆಗಾಗಲೇ ಅವರೊಬ್ಬ ಉತ್ತಮ ಚರ್ಚಾಪಟುವಾಗಿದ್ದು ಹತ್ತಾರು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ಸಂದರ್ಭಗಳು ನನಗಿನ್ನೂ ಚೆನ್ನಾಗಿ ನೆನಪಿದೆ. ಅವರು ಮೊದಲಿನಿಂದಲೂ ವಚನ ಸಾಹಿತ್ಯದ ಬಗ್ಗೆ ಹೆಚು ಒಲವನ್ನು ತೋರಿದವರು. ವಚನ ಸಾಹಿತ್ಯದ ಉನ್ನತ ನೀತಿಸಂಹಿತೆಗಳ ಪರಿಶ್ರಮಪೂರ್ಣ ಅಭ್ಯಾಸ ಅವರಿಗೆ ಸಂಸ್ಕಾರದತ್ತವಾಗಿ ಒಲಿದು ಬಂದಿರುವ ವರವಾಗಿದ್ದು ಅದನ್ನವರು ಸುದೀರ್ಘ ಕಾಲದಿಂದ ರೂಢಿಸಿಕೊಂಡು ಬಂದಿದ್ದಾರೆ.

ವಚನಗಳ ಮೂಲಕ ಬಸವಾದಿ ಶರಣರು ಅಭಿವ್ಯಕ್ತಿಸಿರುವ ಕ್ರಾಂತಿಕಾರಕ ಚಿಂತನೆಗಳು ಎಂದೆಂದಿಗೂ ಪ್ರಸ್ತುತ. ಹನ್ನೆರಡನೆಯ ಶತಮಾನದಲ್ಲಿ ಅವರು ನಡೆಸಿದ ಸಮಾಜೋಧಾರ್ಮಿಕ ಆಂದೋಲನ ಇಡೀ ವಿಶ್ವದ ಇತಿಹಾಸದಲ್ಲಿ ವಿನೂತನವಾಯಿತು. ಅವರ ಅಂದಿನ ಚಿಂತನೆಗಳ ಪ್ರತೀಕವಾಗಿ ಮೂಡಿಬಂದ ವಿಪುಲವಾದ ವಚನಗಳು ಕನ್ನಡ ಸಾಹಿತ್ಯಕ್ಕೆ ಶರಣರು ನೀಡಿದ ಒಂದು ಅಪೂರ್ವ ಕೊಡುಗೆಯಾಗಿದ್ದು ಸಾರ್ವಕಾಲಿಕ ಮೌಲ್ಯವಿರುವ ಅಪರೂಪದ ಶ್ರೇಷ್ಠ ಸಾಹಿತ್ಯ ಪ್ರಭೇದವಾಗಿ ಇಂದಿಗೂ ಅಬಾಧಿತವಾಗಿ ಉಳಿದುಕೊಂಡಿದೆ.

ಸರ್ಕಾರದ ಒಬ್ಬ ದಕ್ಷ ಅಧಿಕಾರಿಯಾಗಿಯೂ ಒಳ್ಳೆಯ ಹೆಸರನ್ನು ಗಳಿಸಿಕೊಂಡಿರುವ ಡಾ. ಸಿ. ಸೋಮಶೇಖರ ಅವರು ಉತ್ತಮ ಸಂಘಟಕರು ಹಾಗೂ ಉನ್ನತ ಸಾಹಿತ್ಯಪ್ರೇಮಿಯೂ ಆಗಿರುವುದು ಇತರರಿಗೆ ಮಾದರಿಯಾಗಿದೆ.



## ನಾಡೋಜ ಡಾ. ದೇಜಗೌ

ನಮ್ಮಲ್ಲಿ ಜ್ಞಾನಿಗಳಿಗೆ ಬೆಲೆ ಕೊಡುವ, ಜ್ಞಾನ ಕುತೂಹಲಿಗಳಾಗಿರುವ ಅಧಿಕಾರಿಗಳು ವಿರಳ. ಲೋಕಾನುಭವ, ಚಿಂತನೆ, ಕಲ್ಪನೆ, ಭಾವಾವಿಷ್ಟತೆ ಸಮೃದ್ಧವಾಗಿದ್ದರೆ ಅವು ಉಕ್ಕಿ ಹರಿಯಲೇ ಬೇಕು. ಅಧಿಕಾರ ದೊರೆತಕೂಡಲೆ ಹಲವು ವ್ಯಕ್ತಿಗಳ ಮತಿ ಜಡವಾಗುತ್ತದೆ. ಅಧಿಕಾರ ಪ್ರಮತ್ತತೆಯ ಒಣ ನೆಲದಲ್ಲಿ ಜ್ಞಾನಾಮೃತ ಇಂಗಿಹೋಗುತ್ತದೆ. ಮಾತ್ರವಲ್ಲ ಜ್ಞಾನಿಗಳನ್ನು ಗೌರವಿಸಬೇಕೆನ್ನುವ ಸೌಜನ್ಯವೂ ಅವರಿಗಿರುವುದಿಲ್ಲ. ನವರತ್ನ ರಾಮರಾವ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸಿದ್ಧಯ್ಯ ಪುರಾಣಿಕ, ಹೆಚ್. ಎಲ್. ನಾಗೇಗೌಡ ಮೊದಲಾದ ಕೆಲವರು ಮಾತ್ರ ಜ್ಞಾನಾಸಕ್ತರು, ಚಿಂತಕರು, ಮೇಧಾವಿಗಳು. ಅದರಿಂದಾಗಿ ಅವರು ಜ್ಞಾನಕೋಶಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದರು. ಸೋಮಶೇಖರ ಅವರು ಆ ವಿಶಿಷ್ಟ ವರ್ಗಕ್ಕೆ ಸೇರಿದವರೆಂಬುದಕ್ಕೆ ಅವರಿಗೆ ಸಂದಿರುವ ಅಪಾರ ಬಿರುದುಗಳು, ಪ್ರಶಸ್ತಿಗಳು, ಬಹುಮಾನಗಳೇ ಸಾಕ್ಷಿ.

ಅವರು ಕನ್ನಡದ ಆರಾಧಕರಾಗಿದ್ದರಿಂದಲೇ ಸಾಮಾನ್ಯ ಕನ್ನಡಿಗರೊಡನೆ ಸಮಾನತಾ ಭಾವದಿಂದ ದಯಾರ್ದ್ರ ಹೃದಯದಿಂದ ಬೆರೆಯಬಲ್ಲರು. ಅವರ ಕಷ್ಟ, ನಷ್ಟ ಬೇರೆ ಬವಣೆಗಳಿಗೆ ಸ್ಪಂದಿಸಬಲ್ಲರು. ಹಾಗೆ ಸ್ಪಂದಿಸದ ಅಧಿಕಾರಿಗಳು ಇದ್ದರೇನು ಇಲ್ಲದಿದ್ದರೇನು ನನಗೆ ಗೊತ್ತಿದ್ದಂತೆ ಶ್ರೀ ಸಿ. ಸೋಮಶೇಖರ ಅವರಲ್ಲಿ ಯಾವುದೇ ದರ್ಪವಾಗಲಿ, ಅಹಂಕಾರವಾಲಿ ಇಲ್ಲವೆಂದೇ ಹೇಳಬೇಕು. ಸಾಮಾನ್ಯರನ್ನು ಪ್ರೀತಿಸುವ, ಅವರಲ್ಲಿ ಒಂದಾಗುವ ಗುಣ ಯಾರಲ್ಲಿದೆಯೋ ಅವನೇ ಶ್ರೇಷ್ಠ ಮಾನವ. ಇವೆಲ್ಲವೂ ಸೋಮಶೇಖರ ಅವರಲ್ಲಿ ಇದೆಯೆಂದು ನಾನು ನಂಬಿದ್ದೇನೆ.

❑

## ನಾಡೋಜ ಡಾ. ಪಾಟೀಲ ಪುಟ್ಟಪ್ಪ



ಡಾ. ಸಿ. ಸೋಮಶೇಖರ ಅವರು ಬರಹದಲ್ಲಿ ಬಲ್ಲಿದರಾಗಿರುವಂತೆ ಮಾತಿನಲ್ಲಿಯೂ ಯಾವ ಅಧ್ಯಾಪಕನಿಗಿಂತಲೂ ಮಿಗಿಲಾದ ಹೆಚ್ಚಿನ ಅರ್ಹತೆ ಪಡೆದಿದ್ದಾರೆ. ತಮ್ಮೆಲ್ಲ ಜವಾಬ್ದಾರಿಗಳ ಮಧ್ಯೆ ಡಾ. ಸಿ. ಸೋಮಶೇಖರ ಅವರು ತಮ್ಮ ವ್ಯಾಪಕ ಅಭ್ಯಾಸಕ್ಕೆ ಹೇಗೆ ಸಮಯವನ್ನು ಹುಡುಕಿಕೊಳ್ಳುತ್ತಾರೆ ಎಂಬುವುದು ಒಂದು ಯಕ್ಷ ಪ್ರಶ್ನೆಯಾಗಿದೆ.

ಅವರು ಸರ್ಕಾರದಲ್ಲಿ ಯಾವುದೇ ಕರ್ತವ್ಯವನ್ನು ನಿರ್ವಹಿಸಲಿ, ಆ ಕೆಲಸಕ್ಕೆ ಅವರಿಗಿಂತ ಅರ್ಹನಾದ ಇನ್ನೊಬ್ಬ ವ್ಯಕ್ತಿ ಸಿಕ್ಕುತ್ತಾನೆನ್ನುವುದು ಅನುಮಾನಾಸ್ಪದ. ಅವರಿಗೆ ನೀವು ಯಾವುದೇ ಕೆಲಸವನ್ನು ವಹಿಸಿಕೊಟ್ಟರೂ ಆ ಕರ್ತವ್ಯವನ್ನು ನೆರವೇರಿಸುವುದಕ್ಕೆ ಅವರಿಗಿಂತ ಶ್ರೇಷ್ಠನಾದ ಇನ್ನೊಬ್ಬ ವ್ಯಕ್ತಿ ಸಿಕ್ಕಲಾರ. ಅಷ್ಟರ ಮಟ್ಟಿಗೆ ಅವರ ಕಾರ್ಯಕ್ಷಮತೆ ಸ್ತುತ್ಯರ್ಹವಾಗಿದೆ.

ನಾಗರಿಕ ಸೇವಾ ವ್ಯವಸ್ಥೆಯಲ್ಲಿ ಡಾ. ಸೋಮಶೇಖರ ಅವರಂತಹ ಅಧಿಕಾರಿಗಳು ಸಿಕ್ಕಿದರೆ ಅವರು ಕಾರ್ಯಮಾಡುವ ಸೇವಾ ವ್ಯವಸ್ಥೆಗೆ ಬಹುದೊಡ್ಡ ಗೌರವ ಬರುತ್ತದೆ. ಜನತೆಯನ್ನು ಅವರು ತಮ್ಮ ಮಾತಿನಿಂದ ಸೆರೆ ಹಿಡಿದು ಆಕರ್ಷಿಸುವ ಶ್ರೇಷ್ಠತೆಯನ್ನು ಸಂಪಾದಿಸಿದ್ದಾರೆ.

ಅವರೊಬ್ಬ ಬಹುದೊಡ್ಡ ಜನಾನುರಾಗಿ. ಜನರ ಬಗ್ಗೆ ಕೆಲಸ ಮಾಡಬೇಕು ಅವರಿಗೆ ಒಳ್ಳೆಯದು ಮಾಡಬೇಕು, ಸಹಾಯ ಮಾಡಬೇಕು ಎನ್ನುವ ಸ್ವಾಭಾವಿಕವಾದ ತುಡಿತವನ್ನು ಇಟ್ಟುಕೊಂಡಿರುವವರು. ಈ ರೀತಿಯ ಮನೋಭಾವವನ್ನು ಹೊಂದಿರುವವರು ಈ ಕಾಲದಲ್ಲಿ ತುಂಬ ಕಡಿಮೆ, ಕಷ್ಟಪಟ್ಟು ಹುಡುಕಬೇಕು.

❑



## ನಾಡೋಜ ಡಾ. ಚಂದ್ರಶೇಖರ ಕಂಬಾರ

ಬೇಕಾದಷ್ಟು ಒಳ್ಳೊಳ್ಳೆಯ ಅಧಿಕಾರಿಗಳು ಇರುತ್ತಾರೆ. ಆದರೆ ಕನ್ನಡದ ಬಗ್ಗೆ ಈ ರೀತಿಯಲ್ಲಿ ಉನ್ನತವಾದ ಪ್ರೀತಿ ಇರುವವರು, ಮತ್ತೆ ಈ ರೀತಿಯಲ್ಲಿ ಆಫೀಸಿಗೆ ಬರುವ ಜನರನ್ನು ಗೌರವಾದರಗಳಿಂದ ಸ್ವಾಗತಿಸಿ ಅವರನ್ನು ಪ್ರೀತಿಯಿಂದ ಕಂಡು ಅವರು ಯಾವ ಕಾರ್ಯಕ್ಕಾಗಿ ಬಂದಿದ್ದಾರೆಯೋ ಅದನ್ನೆಲ್ಲ ಕೇಳಿಕೊಂಡು ಹೀಗೆ ಬರುವ ಜನರಿಗೆ ಸದಾ ಒಳ್ಳೆಯದನ್ನು ಮಾಡುವುದಕ್ಕಾಗಿಯೇ ತುಡಿಯುತ್ತಿರುವಂಥ ನಮ್ಮ ಸಿ. ಸೋಮಶೇಖರರಂಥವರು ಬಹಳ ಅಪರೂಪ.

ಇನ್ನು ಅವರ ಕನ್ನಡ ಬಗೆಗಿನ ಪ್ರೀತಿ. ಕನ್ನಡವನ್ನು ಅವರಷ್ಟು ಸುಲಭವಾಗಿ ಯಾರೂ ಮಾತನಾಡುವುದಿಲ್ಲ. ಒಂದೇ ಒಂದು ಇಂಗ್ಲೀಷ್ ಶಬ್ದ ಬಳಸದೇ ಘಂಟೆಗಟ್ಟಲೆ ಮಾತನಾಡುವಷ್ಟು ಸಾಮರ್ಥ್ಯ ಅವರಿಗಿದೆ. ತಮ್ಮನ್ನು ಭೇಟಿ ಮಾಡಲು ಯಾರೇ ಬಂದರೂ ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡುವುದು ಕನ್ನಡದಲ್ಲಿಯೇ ಹೊರತು ಇಂಗ್ಲಿಷ್‌ನಲ್ಲಲ್ಲ. ಇದು ಅವರ ದೊಡ್ಡ ಗುಣ. ಅಧಿಕಾರಿ ಎಂದರೆ ಸಾಮಾನ್ಯವಾಗಿ ಒಂದು ರೀತಿಯ ಕೀಳರಿಮೆ ಇರುತ್ತದೆ. ಇಂಗ್ಲೀಷ್‌ನಲ್ಲಿ ಮಾತನಾಡುವುದೇ ಅಧಿಕಾರಿಯ ಲಕ್ಷಣ ಎಂದು ತಿಳಿದಿರುತ್ತಾರೆ ಕೆಲವರು. ಆದರೆ ನಮ್ಮ ಸೋಮಶೇಖರರವರು ತದ್ವಿರುದ್ಧ. ಎಲ್ಲಾ ಸಂಭಾಷಣೆಗಳನ್ನು ಅವರು ಚಂದವಾಗಿ ಕನ್ನಡದಲ್ಲಿಯೇ ಮಾತನಾಡುತ್ತಾರೆ. ಇದು ನನಗೆ ಬಹಳ ಪ್ರಿಯವಾದ ಸಂಗತಿ. ಅವರ ಕನ್ನಡ ಕೂಡ ಬಲುಚಂದ, ಬಹಳ ಸುಂದರವಾಗಿ ಮಾತನಾಡುತ್ತಾರೆ. ಹೀಗಾಗಿ ಕನ್ನಡದ ಬಗೆಗಿನ ಅವರ ಪ್ರೀತಿಗೋಸ್ಕರ ಅವರನ್ನು ನಾವು ಎಂದೂ ಮರೆಯುವುದಕ್ಕೆ ಆಗುವುದಿಲ್ಲ.

❏



## ನಾಡೋಜ ಡಾ. ಚನ್ನವೀರ ಕಣವಿ

ಕೆಲವರು ವಿದ್ಯಾರ್ಥಿ ದೆಸೆಯಲ್ಲಿ ಪ್ರಥಮ ದರ್ಜೆ ಸಂಪಾದಿಸುತ್ತಾರೆ. ಆದರೆ ಮುಂದೆ ಅಧಿಕಾರ ಸ್ಥಾನದಲ್ಲಿದ್ದಾಗ ಅಥವಾ ಯಾವುದೇ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಾಗ ಅದೇ ದರ್ಜೆಯನ್ನು ಮುಂದುವರೆಸುತ್ತಾರೆಂದು ಹೇಳಲು ಬರುವುದಿಲ್ಲ. ಡಾ. ಸಿ. ಸೋಮಶೇಖರ ಅವರು ತಮಗೆ ಲಭಿಸಿದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಆ ದರ್ಜೆಗೆ ಮಿಗಿಲಾದ ರೀತಿಯಲ್ಲಿ ಸೇವೆ ಸಲ್ಲಿಸುತ್ತ ಬಂದಿರುವುದು ಅವರ ಹೆಗ್ಗಳಿಕೆ.

ಮೂವತ್ತು ವರ್ಷಗಳ ಹಿಂದೆ ಧಾರವಾಡದಲ್ಲಿ ಅವರು ಅಸಿಸ್ಟೆಂಟ್ ಕಮೀಷನರ್ ತರಬೇತಿ ಪಡೆಯುತ್ತಿದ್ದಾಗ ನನಗೆ ಅವರ ಪರಿಚಯವಾಯಿತು. ತರಬೇತಿಯ ನಂತರ ಧಾರವಾಡದಲ್ಲಿಯೇ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಕಾರ್ಯ– ನಿರ್ವಹಿಸುತ್ತಿರುವಾಗಲೇ ಅವರು ಇಲ್ಲಿಯ ನಾಗರಿಕರೊಂದಿಗೆ ನಡೆದುಕೊಂಡ ರೀತಿ ಮೆಚ್ಚುವಂತಿತ್ತು. ಕನ್ನಡ ನಾಡು–ನುಡಿಯ ಬಗೆಗಿನ ಅವರ ಅಭಿಮಾನ, ನಾಟಕ, ಸಾಹಿತ್ಯ, ಕಲೆಗಳಲ್ಲಿ ತೋರಿಸುತ್ತಿದ್ದ ವಿಶೇಷ ಆಸಕ್ತಿ, ಸಾಂಸ್ಕೃತಿಕ ಕೇಂದ್ರವೆನಿಸಿದ ಧಾರವಾಡದ ಸುಶಿಕ್ಷಿತರನ್ನು ಬಹು ಬೇಗ ಆಕರ್ಷಿಸಿತು.

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅವರು ಉತ್ಸಾಹದಿಂದ ಭಾಗವಹಿಸುತ್ತಿದ್ದರಲ್ಲದೆ ಧಾರವಾಡದ ವಾತಾವರಣ ಅವರ ಮಾತುಗಾರಿಕೆಗೆ ಹೆಚ್ಚಿನ ಹೊಳಪನ್ನು ತಂದುಕೊಟ್ಟಿತೆಂದರೆ ತಪ್ಪಾಗಲಾರದು. ಅಂದಿನಿಂದಲೇ ಆಡಳಿತದಲ್ಲಿ ಕನ್ನಡ ಭಾಷೆಗೆ ಪ್ರಾಧಾನ್ಯ ನೀಡುತ್ತ ಬಂದ ಅವರು ಇಂದಿಗೂ ಆ ಕಾರಣದಿಂದ ವಿಶಿಷ್ಟರೆನಿಸಿದ್ದಾರೆ.

❏



## ನಾಡೋಜ ಪ್ರೊ॥ ಹಂಪನಾ

ಸೋಮಶೇಖರರು ಮೈಕಿನ ಮುಂದೆ ನಿಂತರೆ, ಸಭೆಯ ವೇದಿಕೆ ಹತ್ತಿದರೆ ಪ್ರೇಕ್ಷಕರಿಗೆ ರಸದೌತಣ ಕಟ್ಟಿಟ್ಟ ಬುತ್ತಿ. ಅವರ ನಾಲಗೆಯ ಮೇಲೆ ಕನ್ನಡ ಸಾಹಿತ್ಯ ಸುಧೆ ನಲಿದಾಡುತ್ತಿರುವುದು ದೀರ್ಘ ಕಾಲಿಕ ಅಧ್ಯಯನದಿಂದ ಗಳಿಸಿದ ಸಾಧನೆಯ ಫಲವಾಗಿ. ಬಾಲ್ಯದಿಂದ ಅವರು ಇದನ್ನು ಶ್ರದ್ಧೆಯಿಂದ ರೂಢಿಸಿಕೊಂಡಿದ್ದಾರೆ, ಶ್ರಮದಿಂದ ಸಂಪಾದಿಸಿದ್ದಾರೆ, ಪ್ರೇಮದಿಂದ ಸಮಾಜಕ್ಕೆ ಬಡ್ಡಿ ಸಹಿತ ಧಾರೆಯೆರೆಯುತ್ತಿದ್ದಾರೆ.

ಅವರ ವಾಗ್ ವೈಭವ ಕೇವಲ ಭಾಷಣಕ್ಕೆ ಸೀಮಿತವಾದುದಲ್ಲ. ಅವರ ಲೇಖನಿಯೂ ವಿಚಾರ ತರಂಗಗಳಿಂದ ಓಡುತ್ತದೆ. ಬರಹಗಳ ಒಟ್ಟು ಪ್ರಮಾಣ ಹೆಚ್ಚು ಇಲ್ಲ. ಆಡಳಿತ ಯಂತ್ರ ಚಾಲನೆಯ ನಡುವೆ ಓದು, ಬರಹಕ್ಕೆ ಬಿಡುವು ಕಡಿಮೆ. ಸಾವಿರಾರು ಭಾಷಣಗಳಲ್ಲಿ ಅವರ ಚಿಂತನೆಗಳ ಮಿಂಚಿನ ಸಂಚಾರ, ವೈಚಾರಿಕ ಪ್ರಖರತೆ ಹೊರಹೊಮ್ಮಿದೆ.

ಸರ್ಕಾರದ ದೀರ್ಘಕಾಲಿಕ ಸೇವೆಯಲ್ಲಿ ಅವರು ಹತ್ತಾರು ಕಡೆ, ನಾನಾ ಹುದ್ದೆಗಳಲ್ಲಿ ಕೆಲಸ ಮಾಡಿ ದಕ್ಷ ಅಧಿಕಾರಿ ಎಂದು ಜನರಿಂದಲೂ ಸರ್ಕಾರದಿಂದಲೂ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅವರಿಗೆ ಸಾರ್ವಜನಿಕರು ತೋರಿದ ಮನ್ನಣೆ, ನೀಡಿದ ಗೌರವ ಪ್ರಶಸ್ತಿಗಳಿಗೆ ಪಾರವಿಲ್ಲ. ಪ್ರಶಸ್ತಿಗಳ ಮಹಾ ಮಸ್ತಕಾಭಿಷೇಕದಿಂದ ತೊಯ್ದು ಒದ್ದೆಮುದ್ದೆ ಆಗಿದ್ದರೂ ಡಾ. ಸಿ. ಸೋಮಶೇಖರರನ್ನು ಅವು ಯಾವವೂ ನೆತ್ತಿಗೇರಿ ಅಮಲು ತರಲಿಲ್ಲ. ಅವರು ಸರಳ ಸಜ್ಜನಿಕೆಯ ಸುಸಂಸ್ಕೃತ ಪ್ರಜೆಯಾಗಿ ಉಳಿದಿದ್ದಾರೆ.

ಡಾ. ಸಿ. ಸೋಮಶೇಖರ ನಮ್ಮ ನಡುವೆ ಇರುವ ಚೊಕ್ಕ ಚಿನ್ನ, ಸರ್ಕಾರದ ಹಿರಿಯ ಅಧಿಕಾರಿಗಳ ಗುಂಪಿನಲ್ಲಿ ಕಂಗೊಳಿಸುವ ಅಪರಂಜಿ.

❑



## ಪದ್ಮಶ್ರೀ ಕೆ.ಎಸ್. ನಿಸಾರ್ ಅಹಮದ್

ಉನ್ನತ ಹಾಗೂ ಗುರುತರವಾದ ನಾನಾ ಹುದ್ದೆಗಳಲ್ಲಿ ಹೊಣೆಗಾರಿಕೆ, ವಿಚಕ್ಷಣೆ ಮತ್ತು ಪ್ರಸಂಗಾವಧಾನಗಳಿಂದ ಕಾರ್ಯಶೀಲರಾಗಿ ಸೈ ಎನ್ನಿಸಿಕೊಂಡಿರುವ ಜನಾನುರಾಗಿ ಆಡಳಿತಗಾರರಾದ ಡಾ. ಸಿ. ಸೋಮಶೇಖರ್ ಅವರ ಕಾರ್ಯವ್ಯಾಪ್ತಿ ಇಷ್ಟಕ್ಕೇ ಮುಗಿದಿದ್ದರೆ ಅವರ ಬಗ್ಗೆ ನಮ್ಮ ಅಕ್ಕರಾಸ್ಥೆ, ಮೆಚ್ಚುಗೆಗಳು ಸಹ ಮೊಟಕುಗೊಳ್ಳುತ್ತಿದ್ದವು.

ಅವರಂತಹ ಕರ್ತವ್ಯನಿಷ್ಠ ಅಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿ ಇರಬಹುದು. ಅಂತಹವರ ಕೈಂಕರ್ಯ ಶ್ಲಾಘನೀಯವೇ. ಆದರೆ ಅವರು ತಾವಾಯಿತು, ತಮ್ಮ ಕಛೇರಿಯಾಯಿತು ಎಂದು ಬದುಕನ್ನು ಸವೆಸುತ್ತಾರೆ. ಇದನ್ನು ಮೀರಿದ ಕೆಲವು ಜನಹಿತಪರವಾದ ಆಸಕ್ತಿಗಳನ್ನು ಜೀವಂತವಾಗಿಸಿಕೊಂಡು, ತಮ್ಮ ವ್ಯಕ್ತಿ ವಿಕಾಸದ ಜೊತೆಯಲ್ಲೇ ಸಮಾಜದ ಒಳಿತಿಗೂ ಯಥಾಮತಿ ಕಾಣಿಕೆ ಸಲ್ಲಿಸುವವರ ಬಗೆಗೆ ನಮ್ಮ ಪ್ರೀತ್ಯಾದರ ಇಮ್ಮಡಿಸುತ್ತದೆ. ಡಾ. ಸಿ. ಸೋಮಶೇಖರರು ಈ ವರ್ಗಕ್ಕೆ ಸೇರಿದವರು. ಸಾಮಾಜಿಕ, ಸಾಹಿತ್ಯಿಕ, ಸಂಗೀತಕಲಾದಿ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಪಾತ್ರವಹಿಸಿ, ಅವುಗಳ ಅರಿವು ಜನರಿಗೆ ದಕ್ಕಿ ಬಾಳು ಹಸನಾಗಲು ಶ್ರಮಿಸುತ್ತಿದ್ದಾರೆ; ಸದಭಿರುಚಿಯ ವರ್ಧನೆಗೆ ನಿಮಿತ್ತವಾಗಿದ್ದಾರೆ.

ಸ್ವತಃ ವಾಗ್ಮಿಯಾಗಿ ಸಭಿಕರ ಮನಸ್ಸನ್ನು ಸೂರೆಗೊಳ್ಳುವುದರ ಜೊತೆಗೆ, ಕನ್ನಡದ ಪ್ರಾಚೀನ ಮತ್ತು ಅರ್ವಾಚೀನ ಕವಿಗಳ, ವಚನಕಾರರ, ವಿವಿಧ ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದ ಸಾಧನಶೀಲ ಮಹದ್ವ್ಯಕ್ತಿಗಳ ಸೂಕ್ತಿಗಳನ್ನು ಲೀಲಾಜಾಲವಾಗಿ ಉದಹರಿಸುವ ಅವರ ಸಾಮರ್ಥ್ಯ ಎಂಥವರಿಗೂ ವಿಸ್ಮಯ ಮೂಡಿಸುತ್ತದೆ.

❑



## ಡಾ. ಎಂ.ಎಂ. ಕಲಬುರ್ಗಿ

ವ್ಯಕ್ತಿಗಳಲ್ಲಿ ಬಹುಜನರು ತಮ್ಮ ವೃತ್ತಿಗೆ ಸೀಮಿತವಾಗಿದ್ದರೆ, ಕೆಲವರು ಮಾತ್ರ ಹೆಚ್ಚಿನದಾಗಿ ಪರಿಸರಕ್ಕೆ ಸ್ಪಂದಿಸುತ್ತಾರೆ. ಇಂತಹವರದು ವ್ಯಕ್ತಿನಿಷ್ಠ ಮತ್ತು ಸಮಾಜನಿಷ್ಠ ವ್ಯಕ್ತಿತ್ವವಾಗಿರುತ್ತದೆ. ಇದಕ್ಕೆ ನಿದರ್ಶನರೆನಿಸಿದ್ದಾರೆ, ಚಿ. ಸೋಮಶೇಖರ.

ಇವರು ಮೂಲತಃ ಸರ್ಕಾರದ ವರಿಷ್ಠ ಅಧಿಕಾರಿ. ಬೇರೆ ಬೇರೆ ಹುದ್ದೆಗಳ ನಿರ್ವಹಣೆ ಇವರಿಗೆ ಅನಿವಾರ್ಯ. ಉಸಿರಾಟಕ್ಕೂ ಬಿಡುವಿಲ್ಲದ ಹೊಣೆಗಳಿವು. ಸ್ವಲ್ಪ ಹೆಜ್ಜೆ ತಪ್ಪಿದರೆ ಇಲ್ಲಿ ಪ್ರಪಾತವೇ ಗತಿ. ಇಂತಹ ಅಪಾಯಗಳ ನಡುವೆಯೂ ಸೋಮಶೇಖರ ಅವರು ಸಮಾಜವಾಗಿ ಹಿಗ್ಗುತ್ತ, ಅಲ್ಲೆಲ್ಲ ತಮ್ಮ ಹೆಚ್ಚುವರಿ ಶ್ರಮ-ಸಮಯಗಳನ್ನು ವಿನಿಯೋಗಿಸುತ್ತ ಬಂದಿದ್ದಾರೆ. ಸಮಾಜವೆನ್ನುವುದು ಬಹುಮುಖಿ ಸಂಘಟನೆ. ಇದರಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ, ಇತ್ಯಾದಿ ಕ್ಷೇತ್ರಗಳ ಪ್ರಸಾರ, ಪ್ರಸಿದ್ಧಿಗಾಗಿ ಅವರು ಉದ್ದಕ್ಕೂ ದುಡಿಯುತ್ತ ಬಂದುದು ಒಂದು ವಿಶೇಷ. ಇಂತಹ ಕೆಲಸಗಳ ಯಶಸ್ಸು ಸಮರ್ಥ ಸಂಘಟಕರನ್ನು ಬಯಸುತ್ತದೆ. ಸೋಮಶೇಖರ ಅವರಲ್ಲಿ ಈ ಸಂಘಟನಾ ಶಕ್ತಿ ದೈವದತ್ತವಾದುದು. ಹೀಗಾಗಿ, ಯಾವುದೇ ಕಾರ್ಯಕ್ರಮವಿರಲಿ, ಎಷ್ಟೇ ದೊಡ್ಡ ಸಮಾರಂಭವಿರಲಿ ಅದನ್ನು ಇವರು ಸೃಜನಶೀಲವಾಗಿ ನಿರ್ವಹಿಸುತ್ತಾರೆ.

ಸೋಮಶೇಖರ ಅವರಲ್ಲಿ ಸ್ನೇಹಿತರನ್ನು ಆಕರ್ಷಿಸುವ ಚುಂಬಕ ಶಕ್ತಿ ಇದೆ. ಇವರು ನಿಂತರೆ ಸುತ್ತಲೂ ಜನ ನಿಲ್ಲುತ್ತಾರೆ. ನಡೆದರೆ ಅವರೊಂದಿಗೆ ನಡೆಯುತ್ತಾರೆ. ಈ ಬಗೆಯ ಸಾಂಘಿಕ ವ್ಯಕ್ತಿತ್ವದಿಂದಾಗಿ ಇವರು ಕೈಗೆತ್ತಿಕೊಂಡ ಕಾರ್ಯ, ಕಾರ್ಯಕ್ರಮಗಳು ಯಶಸ್ಸನ್ನು ಸಾಧಿಸುತ್ತವೆ.

❑

## ಗೊ. ರು. ಚ



ನೀವು ಸಸಿಯಾಗಿದ್ದಾಗಿನಿಂದ ಕಸುವುಳ್ಳ ವೃಕ್ಷವಾಗುವವರೆಗೆ
ನಾನು ನಿಮ್ಮನ್ನು ನೋಡುತ್ತ ಬಂದಿದ್ದೇನೆ
ನೀವು ಬೆಳೆದ ಎತ್ತರ ಕಂಡು ನಮಗೆಲ್ಲ ಅಗಾಧ ಅಗ್ಗಳಿಕೆ
ಸ್ವಂತ ಸಾಮರ್ಥ್ಯ, ಆತ್ಮವಿಶ್ವಾಸ, ಕಾರ್ಯನಿಷ್ಠೆಗಳೇ ನಿಮ್ಮ ನಿಚ್ಚಣಿಕೆ !

ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಯಲಿ
ತಾಯ್ನುಡಿಯಲ್ಲೇ ಉತ್ತರ ಬರೆದ ಪ್ರಪ್ರಥಮರು ನೀವು
ಸೇವೆ ಸಲ್ಲಿಸಿದ ಎಲ್ಲ ಕ್ಷೇತ್ರಗಳಲ್ಲೂ
ನಿಮ್ಮ ಸಾಮರ್ಥ್ಯದ ಮುದ್ರೆ; ಸಾಫಲ್ಯದ ಮೊಹರು!

ನೋವು-ನಂಜುಗಳನೆಲ್ಲ ತಾಳ್ಮೆಯಲಿ ಸಹಿಸಿ,
ಸೇವೆ-ಸತ್ಕಾರ್ಯದಲ್ಲಿ ನಗೆಯ ಹಂಚಿಕೊಂಡವರು ನೀವು.
ನಿಮಗೆ ಸಂದಿರುವ ಪ್ರಶಸ್ತಿ-ಪುರಸ್ಕಾರ
ಬಯಸದೆಯೆ ಬಂದ ಭಾಗ್ಯ; ನೀವದಕ್ಕೆ ಪೂರ್ಣ ಯೋಗ್ಯ !

ಸನ್ನಿವೇಶ ಪ್ರಜ್ಞೆಗೆ ನೀವೊಂದು ಅಪರೂಪದ ನಿದರ್ಶನ
'ಕನ್ನಡವ ಬಿಟ್ಟರನ್ಯವಿಲ್ಲ' ಎನ್ನುವ ಕಟ್ಟಾಭಿಮಾನ!
ಹಾಲಿನಂತಹ ಮನಸು, ನಡೆ-ನುಡಿಯಲ್ಲಿ ಸೊಗಸು
ಸಾಹಿತ್ಯ-ಸಂಸ್ಕೃತಿಗಳೇ ನಿಮ್ಮೊಲುಮೆ; ನೀವು ಚಿಂತನ ಚಿಲುಮೆ!

❑



## ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ

ಡಾ. ಸೋಮಶೇಖರ ಬಗ್ಗೆ ಬರೆಯೋಣವೆಂದಾಗ ತಟ್ಟನೆ ನೆನಪಾದದ್ದು ಅವರು ತುಮಕೂರು ಜಿಲ್ಲಾಧಿಕಾರಿಗಳಾಗಿದ್ದಾಗ ನಡೆಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು. ಅಂದು ಅಸ್ಸಾಂನಿಂದ ಬಂದ ನೃತ್ಯತಂಡ ತನ್ನ ವಿಶಿಷ್ಟ ಕಲೆಯ ಪ್ರದರ್ಶನ ನೀಡಿತ್ತು. ಆ ಅಪೂರ್ವ ನೃತ್ಯವನ್ನು ನೋಡುತ್ತಿದ್ದಾಗ ಭಾರತೀಯ ಸಂಸ್ಕೃತಿಯ ವೈವಿಧ್ಯದ ನೆನಪಾಗಿ ಹೃದಯ ಆನಂದ ಭರಿತವಾಯಿತು. ಸಾಂಸ್ಕೃತಿಕ ಹಬ್ಬ ಹೇಗಿರಬೇಕು ಎಂಬುದಕ್ಕೆ ಅದೊಂದು ಉತ್ತಮ ನಿದರ್ಶನವಾಗಿದ್ದಿತು. ಆಶ್ಚರ್ಯದ ಸಂಗತಿಯೆಂದರೆ, ತುಮಕೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಜೊತೆಗೆ ಹೂಡಿಕೊಂಡಿದ್ದ ಕಾರ್ಯಕ್ರಮಗಳು.

ತುಮಕೂರು ಜಿಲ್ಲೆಯ ಸಾಹಿತ್ಯೋತ್ಸವ ದೊಡ್ಡದೊ ಭಾರತೀಯ ಕಲೆಗಳು ದೊಡ್ಡವೋ ಎಂಬುದಲ್ಲ ಇಲ್ಲಿನ ಪ್ರಶ್ನೆ. ಸಂಸ್ಕೃತಿ ಸಂವರ್ಧನೆಯಾಗಬೇಕಾದುದು ಅಗತ್ಯ. ಕನ್ನಡದ ಜನತೆಗೆ ಭಾರತದ ವಿಭಿನ್ನ ಕಲಾವಿದರನ್ನು ಪರಿಚಯಿಸುವುದರ ಜೊತೆಗೆ ಅಲ್ಲಿನವರ ಕಲೆಗಳನ್ನು ತಂದು ತುಮಕೂರಿನ ರಸಿಕರಿಗೆ ಉಣಬಡಿಸಿದ ರೀತಿ ಶ್ಲಾಘನೀಯವಾದುದು.


ತುಮಕೂರಿನ ಜಿಲ್ಲಾಧಿಕಾರಿಗಳಾಗಿದ್ದ ಅವಧಿಯಲ್ಲಿ ಜೊಂಡುಬೆಳೆದು ನಿರ್ಜಲವಾಗತೊಡಗಿದ್ದ ಅಮಾನಿ ಕೆರೆಯನ್ನು ಶುಭ್ರಗೊಳಿಸಿ ಅದನ್ನೊಂದು ಸುಂದರ ಜಲಾಶಯವಾಗಿಸಿರುವುದು ನನಗೆ ಬಹಳ ಮೆಚ್ಚುಗೆಯ ಅಂಶವಾಗಿದೆ. ಏಕೆಂದರೆ, ವೈಯಕ್ತಿಕವಾಗಿ ನಾನು ಎಷ್ಟೋ ಸೂರ್ಯೋದಯಗಳನ್ನು ಆ ಕೆರೆಯ ಪೂರ್ವ ಭಾಗದಲ್ಲಿ ನಿಂತು ನೋಡಿ ಆನಂದಿಸಿದ್ದೇನೆ. ❑



## ಶ್ರೀ ಎಂ. ವಿ. ರಾಜಶೇಖರನ್

ಹಲವಾರು ದಶಕಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಿರಿಯ ಅಧಿಕಾರಿಗಳಾಗಿ ವಿಶಿಷ್ಟ ಸ್ಥಾನವನ್ನು ಅಲಂಕರಿಸಿ ಬಹುಮುಖ ಸೇವೆಯನ್ನು ರಾಜ್ಯದ ಅಭಿವೃದ್ಧಿಗೆ ಮತ್ತು ಜನರ ಕಲ್ಯಾಣಕ್ಕೆ ಅತ್ಯಂತ ಪ್ರಾಮಾಣಿಕತೆ, ದಕ್ಷತೆ ಮತ್ತು ನಿಷ್ಠೆಯಿಂದ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದು, ಆಯಾಯಾ ಇಲಾಖೆಗಳಲ್ಲಿ ನಿಮ್ಮದೇ ಆದಂತಹ ಸ್ಮರಣೀಯ ಛಾಪನ್ನು ಮೂಡಿಸಿರುವುದರ ಜೊತೆಜೊತೆಗೆ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು, ಸರಳ, ಸುಸಂಸ್ಕೃತ ಮತ್ತು ಸಜ್ಜನಿಕೆಯ ಮತ್ತು ಸ್ನೇಹಶೀಲ ವ್ಯಕ್ತಿತ್ವವನ್ನು ಹೊಂದಿರುವ ಗಣ್ಯರು ನೀವಾಗಿದ್ದೀರಿ. ಶರಣರ ವಿಚಾರಧಾರೆಗಳ ಬಗ್ಗೆ ಶ್ರೇಷ್ಠ ಜ್ಞಾನವನ್ನು ಹೊಂದಿರುವುದಲ್ಲದೆ, ವಚನಗಳಲ್ಲಿ ಸಾಮಾಜಿಕ ಚಿಂತನೆ ಎಂಬ ಪ್ರೌಢ ಪ್ರಬಂಧವನ್ನು ರಚಿಸಿ, ಅದಕ್ಕೆ ಹಂಪಿ ವಿಶ್ವವಿದ್ಯಾಲಯದಿಂದ ಡಿಲಿಟ್ ಪದವಿ ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ. ಅಷ್ಟೇ ಅಲ್ಲದೆ, ಒಬ್ಬ ಉತ್ತಮ ವಾಗ್ಮಿಯಾಗಿ, ಸಂಘಟಕರಾಗಿ, ಅನುಪಮ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ನಿಮ್ಮದೇ ಆದಂತಹ ಕೊಡುಗೆ ಸಲ್ಲಿಸುತ್ತಿರುವುದು ಅಭಿಮಾನದ ವಿಷಯವಾಗಿದೆ. ಬಸವಾದಿ ಪ್ರಮಥರ ವಚನಗಳನ್ನು ಯಾವುದೇ ಸಭೆಯಿರಲಿ, ಸಮಾರಂಭಗಳಿರಲಿ, ಅಲ್ಲೆಲ್ಲಾ ಶರಣರ ವಚನಗಳನ್ನು ಉದಹರಿಸುತ್ತಾ ಜನರಲ್ಲಿ ಒಂದು ರೀತಿಯ ಜಾಗೃತಿಯನ್ನೇ ಉಂಟುಮಾಡುವ ಒಬ್ಬ ನಾಡಿನ ಸಂಸ್ಕೃತಿಯ ಆರಾಧಕರು ನೀವಾಗಿದ್ದೀರಿ ಎಂದರೆ ಅತಿಶಯೋಕ್ತಿ ಆಗಲಾರದು.

ರಾಜ್ಯದ ಒಬ್ಬ ಹಿರಿಯ ಅಧಿಕಾರಿಗಳಾಗಿರುವುದರ ಜೊತೆಗೆ, ಸಮಾಜಮುಖಿ ಕೆಲಸ ಮಾಡುವ ನಿಮ್ಮಂತಹ ಸ್ನೇಹಶೀಲ ಗಣ್ಯ ವ್ಯಕ್ತಿತ್ವವನ್ನು ಹೊಂದಿರುವ ಆತ್ಮೀಯರನ್ನು ಪಡೆದಿರುವುದು ನನ್ನ ಸುಯೋಗವಾಗಿದೆ. ❑



## ಡಾ. ದೊಡ್ಡರಂಗೇಗೌಡ

ಬಹುಮುಖಿ ಪ್ರತಿಭೆಯ
ಗುಣ ಸಂಪನ್ನರು,
ನಮ್ಮ ನಿಮ್ಮೆಲ್ಲರ ನೆಚ್ಚಿನ ಗೆಳೆಯರು
ನಲ್ಮೆಯ ಸೋಮಶೇಖರರು;

ಕಣ್ಣಲ್ಲಿ ಎಣ್ಣೆಯ ಹೊಯ್ದುಕೊಂಡು
ಹಗಲಿರುಳು ಓದಿದವರು,
ಬಡತನದಿ ಬವಣೆಯ ಹೊತ್ತುಕೊಂಡು
ವ್ಯಕ್ತಿತ್ವವನ್ನೇ ನಾದಿದವರು!

ಜನಮನ ಸೆಳೆದ ವಾಗ್ಮಿಗಳು
ಹೊಸಕೋಟೆ ಮಣ್ಣಿನ ಮಕ್ಕಳು
ಚಾಣಾಕ್ಷ ಆಡಳಿತಗಾರರು
ರಾಜ್ಯದ ಪ್ರಗತಿಯ ರಥ ಎಳೆದವರು.

ಎಂದೆಂದೂ ಸ್ವಂತಿಕೆ ಮೆರೆದವರು
ನಮ್ಮ ನಿಮ್ಮ ಪ್ರೀತಿ ಸೋಮಶೇಖರರು
ಸ್ವಾಭಿಮಾನ ಮೆರೆದು ಕನ್ನಡ ಮೆರೆಸಿದವರು
ನಮ್ಮ ನಿಮ್ಮ ಪ್ರೀತಿಯ ಈ ಗೆಳೆಯರು

❑

## ಡಾ. ಅರಳುಮಲ್ಲಿಗೆ ಪಾರ್ಥಸಾರಥಿ




ಡಾ. ಸಿ. ಸೋಮಶೇಖರ ಭಾರತೀಯ ಸಂಸ್ಕೃತಿಯ, ಮಾನವೀಯ ಭಾವನೆಗಳ ಅಚ್ಚುಮೆಚ್ಚಿನ ಸಾಹಸಿ, ಸಾಹಿತಿ ಹಾಗೂ ಸಾಧಕ. ವಿದ್ಯೆ, ವಿನಯ, ವಿವೇಕಗಳ ತ್ರಿವೇಣಿ ಸಂಗಮವಾದ ಸೋಮಶೇಖರ ನಾನು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ದಿನದಿಂದಲೂ ನನ್ನ ಬಗ್ಗೆ ಅಪಾರ ಅಭಿಮಾನವಿಟ್ಟಿದ್ದವರು. ಅವರೂ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದವರು. ಮುಂದೆ ನಾನು ಎಂ.ಇ.ಎಸ್. ಕಾಲೇಜಿನಲ್ಲಿ ಅಧ್ಯಾಪಕನಾದ ಮೇಲೆ ಅವರು ಕಾಲೇಜು ಅಧ್ಯಾಪಕರಾದರು. ಆಗಲೂ ನಮ್ಮ ಗೆಳೆತನ ಸಾಹಿತ್ಯಾತ್ಮಕವಾಗಿ ಮುಂದುವರೆಯಿತು.

ನಾವಿಬ್ಬರೂ ಕಲಿತದ್ದೇ ಒಂದು. ಆದರೆ ಪರಮಾತ್ಮ ಅನುಗ್ರಹಿಸಿದ್ದೇ ಒಂದು. ಸೋಮಶೇಖರ ಉನ್ನತ ಆಡಳಿತದಲ್ಲಿ ದೀಕ್ಷಾದಕ್ಷರಾಗಿ ಕೆಲಸ ಮಾಡಿದರು. ಅವರ ಹೃದಯ, ಮನಸ್ಸು, ವಚನಸಾಹಿತ್ಯಕ್ಕಾಗಿ ಮಿಡಿಯುತ್ತಿತ್ತು.

ನನ್ನ ದಾಸ ಸಾಹಿತ್ಯದ ಅನ್ವೇಷಣೆಯ ದಾರಿಯಲ್ಲಿ ಬಾಗಿಲುಗಳು ತಾವಾಗಿಯೇ ತೆರೆದುಕೊಂಡಂತೆ, ಸೋಮಶೇಖರ ಅವರು ವಚನಸಾಹಿತ್ಯದ ಅನ್ವೇಷಣೆಯಲ್ಲಿ ತೊಡಗಿಕೊಂಡರು. 'ವಚನಗಳಲ್ಲಿ ಸಾಮಾಜಿಕ ಚಿಂತನೆ' ಎಂಬ ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್. ಪದವಿಯನ್ನು ಪಡೆದುಕೊಂಡರು.

ಕಾಲೇಜಿನ ದಿನಗಳಲ್ಲೇ ನಾಯಕತ್ವದ ಎಲ್ಲ ಗುಣಗಳೂ ಅವರಲ್ಲಿ ಮಡುಗಟ್ಟಿದ್ದವು. ಯಾವುದೇ ಕಾರ್ಯಕ್ರಮ, ಸಮಾರಂಭವನ್ನು ಅವರು ಕಾಲೇಜಿನಲ್ಲಿ ಆಯೋಜಿಸುತ್ತಿದ್ದರೆಂದರೆ ಅದರ ಹಿಂದೆ ಸಮರ್ಥವಾದ ಯೋಜನೆ, ಸಂಘಟನೆ ಹಾಗೂ ಕಾರ್ಯಕ್ಷಮತೆ ತುಂಬಿರುತ್ತಿತ್ತು.

❑



## ಎಚ್ಚೆಸ್ಕೆ

ಕರ್ನಾಟಕ ರಾಜ್ಯದ ಕನ್ನಡ-ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿರುವ ಸಿ. ಸೋಮಶೇಖರ್ ಅವರನ್ನು ನೆನಸಿಕೊಂಡಾಗ ಬಸವಣ್ಣನವರ ವಚನವೊಂದು ನೆನಪಿಗೆ ಬರುತ್ತದೆ. 'ಎಲ್ಲರೂ ವೀರರು, ಎಲ್ಲರೂ ಧೀರರು, ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು ! ಕಾಳಗದ ಮುಖದಲ್ಲಿ ಕಾಣಬಹುದು. ಓಡುವ ಮುಖದಲ್ಲಿ ಕಾಣಬಾರದು'.

ಸರ್ಕಾರದ ಅಧಿಕಾರದಲ್ಲಿರುವವರೆಲ್ಲರೂ ವೀರರು, ಧೀರರು ಎಂದು ಹೊಗಳುವುದು ಸಾಮಾನ್ಯ. ಅವರೂ ತಾವು ಅಧಿಕಾರಿಗಳೆಂದೇ ಸದಾ ವರ್ತಿಸುವುದೂ ಸಾಮಾನ್ಯವೇ. ಅಧಿಕಾರವೆಂಬುದು ಹಾವಾಡಿಗನ ಬುಟ್ಟಿಯಲ್ಲಿರುವ ಹಾವಿನ ಹಾಗೆ. ಆಟವಾಡಿಸುವಾಗ ಮಾತ್ರ ಅದನ್ನು ಹೊರಗೆ ತೆಗೆಯಬೇಕು. ಸದಾ ಅದರೊಂದಿಗೆ ಇರಬಾರದು- ಎಂದು ಮಾಸ್ತಿಯವರು ಹೇಳಿದ ಮಾತು ನಿತ್ಯಸತ್ಯ – ಕಾಳಗದ ಮುಖದಲ್ಲಿ ಕಾಣಬಹುದು. ಓಡುವ ಮುಖದಲ್ಲಲ್ಲ ಎಂಬ ಬಸವ ವಚನದ ಹಾಗೆ. 'ಕಡತದಲ್ಲಿ ವ್ಯಕ್ತಿಯನ್ನು ಕಾಣು. ವ್ಯಕ್ತಿಯನ್ನು ಕಡತವಾಗಿ ಕಾಣಬೇಡ ಎಂಬುದು ಸೋಮಶೇಖರರ ಅಧಿಕಾರ ಜೀವನದ ಸೂತ್ರ. ಅಂತೆಯೇ ಇವರದು ಅಧಿಕಾರಾರೂಢದಿಂದ ಆಚೆಗಿನ ವ್ಯಕ್ತಿತ್ವ, ಬಸವ ತತ್ತ್ವದಲ್ಲಿ ಅದ್ದಿದ ಮನಸ್ಸು.

ಸೋಮಶೇಖರ್ ಅವರ ಜನನ ಬೆಂಗಳೂರು ಜಿಲ್ಲೆಯ ಹೊಸಕೋಟೆಯಲ್ಲಿ (1954). ಎಂ.ಕಾಂ. ಓದಿದವರು, ಉದ್ದಕ್ಕೂ ಪ್ರಥಮದರ್ಜೆ. ಓದು ಜೊತೆಗೆ ಚರ್ಚೆಗಳಲ್ಲಿ ಆಸಕ್ತಿ. ದಲಿತ ಕವಿ ಸಿದ್ಧಲಿಂಗಯ್ಯನವರ ಸಹವಾಸ. ಮನಸ್ಸಿನ ಕವಾಟದ ತೆರವು. ಕಾಮರ್ಸ್ ಹಿನ್ನೆಲೆಯಲ್ಲಿ ಕಾವ್ಯಾಭ್ಯಾಸ ಮಾಡಿದ ಸೋಮಶೇಖರ್ ಬದುಕು ವಿರೋಧಾಭಾಸವೇನಲ್ಲ. ಎರಡೂ ಬದುಕಿಗೆ ಹತ್ತಿರವೇ. ❑

## ನಾಡೋಜ ಕಮಲಾ ಹಂಪನಾ



ಅದೊಂದು ಸುಂದರ ಮುಸ್ಸಂಜೆ. ಆಹ್ಲಾದಕರ ವಾತಾವರಣ. ಮುವ್ವತ್ತು ವರುಷಗಳ ಹಿಂದಿನ ಮಾತು. ವೇದಿಕೆಯಲ್ಲಿ ನಿಂತ ಒಬ್ಬ ಸ್ಫುರದ್ರೂಪಿ ಯುವಕ ಭಾಷಣ ಪ್ರಾರಂಭಿಸಿದನು. ಆ ಮಾತುಗಳನ್ನು ಮೀರಿದ ಜೋಗದ ಜಲಪಾತದ ತಡಸಲನ್ನು ಮುಟ್ಟುವ ಅಂತರಂಗದ ನುಡಿಗಳಾಗಿದ್ದವು. ವಾಕ್ಯವಾಕ್ಯಕ್ಕೆ ಕನ್ನಡ ಕವಿಗಳ ಸಾಲುಗಳನ್ನು ಉದ್ಧರಿಸುತ್ತಾ ಹರಿದು ಬಂದ ಆ ವಾಗ್ಝರಿ ಸಾಹಿತ್ಯದ ರಸದೌತಣವನ್ನು ನೀಡಿತ್ತು. ಅಭಿಪ್ರಾಯಗಳ ಮಂಡನೆ, ಭಾವನೆಗಳ ಅಭಿವ್ಯಕ್ತಿ, ಸ್ವರದಲ್ಲಿನ ಏರಿಳಿಯುವಿಕೆ, ಅಡ-ತಡೆಯಿಲ್ಲದ ಮಾತುಗಾರಿಕೆ-ಸಭೆಯನ್ನು ಮಂತ್ರಮುಗ್ಧಗೊಳಿಸಿತ್ತು. ಸಹಜವಾಗಿಯೇ ಇತರರ ಉಪನ್ಯಾಸಗಳನ್ನು ಗಮನವಿಟ್ಟು ಕೇಳುವ ನಾನು ಆ ಯುವ ಚೇತನದ ಮಾತಿಗೆ ಮರುಳಾಗಿದ್ದೆ, ಮೂಕಳಾಗಿದ್ದೆ. ಆಗ ಪರಿಚಯವಾದ ತೇಜಸ್ವಿ ಯುವಕನೇ ಅಂದಿನ ಸಿ. ಸೋಮಶೇಖರ್. ಅಂದು ಬೆಳೆದ ಆ ನಂಟಿನ ಗುಂಟು ವರುಷಗಳು ಉರುಳಿದಂತೆ ಗಟ್ಟಿಯಾಯಿತೇ ಹೊರತು ಸಡಿಲವಾಗಲಿಲ್ಲ, ಕಳಚಿಕೊಳ್ಳಲಿಲ್ಲ.

ಎಂ.ಕಾಂ. ಸ್ನಾತಕೋತ್ತರ ಪದವೀಧರರಾದ ಸೋಮಶೇಖರ್ ಮೊದಲು ಆಯ್ಕೆ ಮಾಡಿಕೊಂಡದ್ದು ವಾಣಿಜ್ಯ ಅಧ್ಯಾಪಕ ವೃತ್ತಿ. ಒಳ್ಳೆಯ ವಾಕ್ಪಟುತ್ವ ಇರುವ ಅಧ್ಯಾಪಕರು ದೊರೆತರೆ ವಿದ್ಯಾರ್ಥಿಗಳಿಗೆ ಹಬ್ಬ. ಆ ಹಬ್ಬದ ವಾತಾವರಣದಲ್ಲಿ ಎರಡು-ಮೂರು ವರುಷಗಳು ಸಾಗಿ ಹೋದದ್ದು ಆ ಯುವಕನಿಗೆ ತಿಳಿಯಲೇ ಇಲ್ಲ.

ಆ ವೇಳೆಗೆ ಸರ್ಕಾರಿ ಕೆಲಸ ಸೋಮಣ್ಣನನ್ನು ಅರಸಿ ಬಂದಿತು. ವಿದ್ಯೆ ಮತ್ತು ಆಡಳಿತ ಸೇವೆಯ ಪಕ್ಷಪಾತಿಯಾದ ಅವರು ಕೆ.ಎ.ಎಸ್. ಪದವಿಗಳಿಸಿದರು. ಅನಂತರದ ವರುಷಗಳಲ್ಲಿ ಐ.ಎ.ಎಸ್. ಪದವಿ ಅವರ ಕಿರೀಟ ಏರಿತು. ❑



## ಡಾ. ಸಿದ್ಧಲಿಂಗಯ್ಯ (ದಲಿತ ಕವಿ)

ಪ್ರಾಮಾಣಿಕ ಪರಿಶ್ರಮ ಮತ್ತು ದಿಟ್ಟ ಸಂಕಲ್ಪಗಳು ಒಬ್ಬ ವ್ಯಕ್ತಿಯನ್ನು ಎಷ್ಟು ಔನ್ನತ್ಯಕ್ಕೆ ಕೊಂಡೊಯ್ಯಬಲ್ಲವು ಎಂಬುದಕ್ಕೆ ಸಮರ್ಥ ಸಾಕ್ಷಿಯಾಗಿರುವ ನಮ್ಮ ನಡುವಿನ ಒಬ್ಬ ಅಪರೂಪದ ದಕ್ಷ ಐಎಎಸ್ ಅಧಿಕಾರಿಯಾಗಿರುವ ಡಾ. ಸಿ. ಸೋಮಶೇಖರ ಅವರು ವಿದ್ಯಾರ್ಥಿ ಹಂತದಲ್ಲಿದ್ದಾಗಲೇ ತಮ್ಮ ಭವಿಷ್ಯದ ಬೆಳವಣಿಗೆಯ ಬಗ್ಗೆ ಸ್ಪಷ್ಟ ಅರಿವನ್ನು ಮೂಡಿಸಿಕೊಂಡಿದ್ದ ಬಹುಮುಖ ಪ್ರತಿಭಾವಂತ ಮಿತ್ರ ಹಾಗೂ ನನ್ನ ಸಹಪಾಠಿ ಎಂಬುದು ಹೆಮ್ಮೆಯ ವಿಷಯ.

ಬಾಲ್ಯದಿಂದಲೇ ಒಬ್ಬ ಅಪ್ರತಿಮ ವಾಕ್ಪಟುವಾಗಿ ರೂಪುಗೊಂಡಿದ್ದ ಶ್ರೀಯುತರು ತಾವು ಪ್ರತಿನಿಧಿಸಿದ್ದ ಎಲ್ಲ ಶಾಲೆಗಳಿಗೆ, ಕಾಲೇಜುಗಳಿಗೆ, ಹಾಸ್ಟೆಲುಗಳಿಗೆ ಮಾತ್ರವೇ ಅಲ್ಲ, ಇಡೀ ವಿಶ್ವವಿದ್ಯಾಲಯಕ್ಕೆ ಅನುಪಮ ಕೀರ್ತಿಯನ್ನು ತಂದುಕೊಟ್ಟಿದ್ದ ಅಪೂರ್ವ ವಿದ್ಯಾರ್ಥಿ.

ಯಾವುದೇ ಚರ್ಚಾಸ್ಪರ್ಧೆಯಿರಲಿ, ಎಂತಹ ಪ್ರತಿಸ್ಪರ್ಧಿಯೇ ಇರಲಿ ನಿರರ್ಗಳವಾಗಿ ಮಾತನಾಡಿ ಅವರನ್ನು ಸಮರ್ಥವಾಗಿ ಎದುರಿಸಿ ಅರ್ಹವಾಗಿಯೇ ಬಹುಮಾನ ಗಳಿಸಿಕೊಳ್ಳುತ್ತಿದ್ದುದು ಒಂದು ಮುಖವಾದರೆ, ಅವರು ಭಾಗವಹಿಸಿ ಮಾತನಾಡಿದ ಯಾವುದೇ ಸಭೆ ಅವರ ಮಾತುಗಳಿಂದ ಒಂದು ರೀತಿಯ ಸಮ್ಮೋಹನಕ್ಕೆ ಒಳಗಾಗುತಿದ್ದುದು ಇನ್ನೊಂದು ಮುಖ. ಇದನ್ನು ನಾನು ನೇರವಾಗಿ ಕಂಡಿದ್ದೇನೆ. ನಾವಿಬ್ಬರೂ ಜೊತೆಗೂಡಿ ಹತ್ತಾರು ಪ್ರತಿಷ್ಠಿತ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿದ ನೆನಪುಗಳು ನನ್ನ ಸ್ಮೃತಿಪಟಲದಲ್ಲಿ ಇನ್ನೂ ಹಚ್ಚ ಹಸಿರಾಗಿಯೇ ಉಳಿದಿವೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಪ್ರತಿಮ ವಾಕ್ಪಟುವಾಗಿ ಮಿಂಚಿದ ಡಾ. ಸಿ. ಸೋಮಶೇಖರ ಅವರು ಈ ಕಾಲದಲ್ಲಿ ಸೋಲಿಲ್ಲದ ಸರದಾರರೆಂದೇ ಕೀರ್ತಿ ಪಡೆದಿದ್ದರು. ❑

## ಪ್ರೊ| ಜಿ. ಹೆಚ್. ಹನ್ನೆರಡುಮಠ

ಶಿಖರ ಸಾಧನೆ ನಿಖರ ಶೋಧನೆ
ಸೋಮಶೇಖರ ಸಂಸ್ಕೃತಿ
ಕಡಲ ಅಳಕೆ ನಡೆದ ಕಲ್ಪನೆ
ಆತ್ಮಯಾತ್ರೆಯ ಧೀಶೃತಿ

**ಮಾತು ಮಂತ್ರಾ**
**ದುಡಿಮೆ ಯಂತ್ರಾ**

ಜೀವ ತಂತ್ರದ ಜಂಗಮಾ
ಶರಣ ವಾಙ್ಮಯ
ಚೈತ್ರ ಕೋಗಿಲೆ
ಮುಗಿಲು
ಮೊಳಗಿದ ಡಿಂಢಿಮಾ

ದುಡಿಮೆಯೊಂದೇ
ದೈವ ಪೂಜೆಯು
ಪ್ರೀತಿ ಸುಂದರ ಧರ್ಮವು
ಕಣ್ಣಿನೊಳಗಿನ
ಕಣ್ಣು ಅದ್ಭುತ
ಸೂಕ್ಷ್ಮದರ್ಶನ ಯಜ್ಞವು

ಎಲ್ಲಿ ನೋವಿದೆ
ಎಲ್ಲಿ ಸೋಲಿದೆ
ಅಲ್ಲಿ ನಿನ್ನಯ ಉದ್ಯಮಾ
ಬೆವರಿನಾಳದ
ಬೆಂಕಿ ಎಲ್ಲಿದೆ
ಅಲ್ಲಿ ನೀನೆ ಗಮಗಮಾ

ಮೌನ ಈಚೆಗೆ
ಮಾತು ಆಚೆಗೆ
ನಿನ್ನ ಲೇಖನಿ ಚಾಚಿದೆ
ಜೀವಬ್ರಹ್ಮದ
ದ್ವಂದ್ವದೊಂದಿಗೆ
ನಿನ್ನ ಸ್ಪರ್ಶವು ಕೂಗಿದೆ
ಮಂತ್ರದರ್ಶನ ನೀಡಿದೆ
ಸೋಮಶೇಖರವಾಗಿದೆ, ❑



## ನಾಡೋಜ ನ್ಯಾ. ಡಾ. ವಿ.ಎಸ್. ಮಳಿಮಠ

ಡಾ. ಸಿ. ಸೋಮಶೇಖರ ಅಂದ ತಕ್ಷಣ ನೆನಪಿಗೆ ಬರುವುದು ಅವರ ವಿಶ್ವಾಸ, ಸಜ್ಜನಿಕೆ, ಮಾನವೀಯತೆ. ಸಮಾಜದಲ್ಲಿ ಇವೆಲ್ಲಾ ಇಂದು ಅಪರೂಪವಾಗುತ್ತಿರುವ ಗುಣಗಳು. ಒಳ್ಳೆಯದಕ್ಕೆ ಸ್ಪಂದಿಸುವ ಭಾವ ತೀವ್ರತೆ ಇಂದು ಕಾಣುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಮಗೆ ಸೋಮಶೇಖರ ಮುಖ್ಯರಾಗುತ್ತಾರೆ.

ತಮ್ಮ ಮನಸ್ಸಿನ ಸಂತೋಷವನ್ನು, ಸಂವೇದನೆಯನ್ನು ತಮ್ಮ ಸುತ್ತಮುತ್ತಲ ಪರಿಸರಕ್ಕೆ ಅಷ್ಟೇ ಪರಿಣಾಮಕಾರಿಯಾಗಿ ಸಂವಹನ ಮಾಡುವ ಅಪೂರ್ವ ಗುಣದ ಸೋಮಶೇಖರ ಅವರು ಇದ್ದಾರೆಂದರೆ ಇಡೀ ವಾತಾವರಣ ಉತ್ಸಾಹದಿಂದ ಪುಟಿಯುತ್ತಿರುತ್ತದೆ. ಇದೊಂದು ಬಹುದೊಡ್ಡ ಗುಣ. ಅವರ ಈ ಭಾವನೆಯಲ್ಲಿ ನೈಜತೆ ಇದೆ, ಶುದ್ಧತೆ ಇದೆ, ಪಾರದರ್ಶಕತೆ ಇದೆ, ಸ್ವಾರ್ಥದ ಹೀಗಾಗಿ ಸರಳವಾಗಿ ಅರ್ಥ ಮಾಡಿಕೊಳ್ಳಲು ಬಯಸುವವರಿಗೆ ಅವರೊಬ್ಬ ಸಜ್ಜನಿಕೆಯ ಪ್ರತಿ ಮೂರ್ತಿ. ಹೀಗಾಗಿ ಸಹಜವಾಗಿಯೇ ಅವರೊಬ್ಬ ಜನಪ್ರಿಯ ಅಧಿಕಾರಿ, ಜನಪ್ರಿಯ ವ್ಯಕ್ತಿ.

ಅವರು ತುಂಬಾ ಚೆನ್ನಾಗಿ ಮಾತನಾಡುತ್ತಾರೆ ಎನ್ನುವುದಕ್ಕಿಂತಲು ತಾವು ತಲುಪಿಸಬೇಕಾದ ವಿಚಾರವನ್ನು ಸ್ಪಷ್ಟವಾಗಿ, ದಿಟ್ಟವಾಗಿ, ಅತ್ಯಂತ ಪ್ರಭಾವಪೂರ್ಣವಾಗಿ ಕೇಳುಗರ ಹೃದಯಕ್ಕೆ ನೇರವಾಗಿ ತಲುಪಿಸುತ್ತಾರೆ. ಇದೊಂದು ಮಹಾನ್ ಸಿದ್ಧಿ. ಹೀಗಾಗಿ ಬಹು ಗಹನವಾದ ತಾತ್ತ್ವಿಕ ಚಿಂತನೆಗಳು, ಸುಲಭವಾಗಿ ನಮ್ಮ ಮಸ್ತಕ ಸೇರುತ್ತವೆ, ನಮ್ಮನ್ನು ಅವರತ್ತ ಆಕರ್ಷಿಸುವಂತೆ ಮಾಡುತ್ತವೆ. ನಮ್ಮ ವಚನಕಾರರ ಭಾವನೆಗಳು ಸೋಮಶೇಖರರ ಬಾಯಿಯಲ್ಲಿ ಅರಳುವ ಪರಿಯೇ ಅನನ್ಯ.

❑



## ನ್ಯಾ. ಡಾ. ಶಿವರಾಜ ಪಾಟೀಲ

ಒಬ್ಬ ದಕ್ಷ ಅಧಿಕಾರಿ ಉತ್ತಮ ಸಾಹಿತಿಯಾಗಿರುವುದು, ಹಾಗೆಯೇ ಒಬ್ಬ ಉತ್ತಮ ಸಾಹಿತಿ ದಕ್ಷ ಅಧಿಕಾರಿಯಾಗಿರುವುದು ಎರಡೂ ವಿರಳ, ಡಾ. ಸಿದ್ಧಯ್ಯ ಪುರಾಣಿಕರ ನಂತರ ಇಂಥದೊಂದು ಅಪರೂಪದ ಸಂಯೋಗ ನಮಗೆ ಸಿಗುವುದು ಡಾ. ಸಿ. ಸೋಮಶೇಖರ ಅವರಲ್ಲಿ. ಆ ಕಾಲಕ್ಕೆ ಅವರಾದರೆ ಈ ಕಾಲಕ್ಕೆ ಇವರು. ಹಾಗೆಯೇ ಒಳ್ಳೆಯ ಬರಹಗಾರರೆಲ್ಲಾ ಒಳ್ಳೆಯ ವಾಗ್ಮಿಗಳಾಗಿರುವುದಿಲ್ಲ. ನಮ್ಮ ಪ್ರಸಿದ್ಧ ಸಾಹಿತಿಗಳೆಲ್ಲಾ ವಾಗ್ಮಿಗಳಾಗಿರಲಿಲ್ಲ. ಇದಕ್ಕೂ ಒಂದು ಅಪವಾದವೆಂದರೆ ನಮ್ಮ ಸೋಮಶೇಖರರು. ಅವರು ಒಬ್ಬ ಒಳ್ಳೆಯ ಸಾಹಿತಿಯೂ ಹೌದು, ವಾಗ್ಮಿಯೂ ಹೌದು.

ಇದರ ಜೊತೆಗೆ ಅವರಲ್ಲಿ ಇನ್ನೂ ಒಂದು ವೈಶಿಷ್ಟ್ಯವಿದೆ. ಉನ್ನತ ಅಧಿಕಾರದಲ್ಲಿರುವವರು ಕರ್ತವ್ಯದ ಜವಾಬ್ದಾರಿಯಿಂದಾಗಿ ಸಮಾಜದಿಂದ ದೂರವೇ ಇರುತ್ತಾರೆ.

ತಾವಾಯಿತು, ತಮ್ಮ ಕೆಲಸವಾಯಿತು ಎಂಬಂತೆ. ಜನಸಂಪರ್ಕ ಸೀಮಿತವಾಗಿರುತ್ತದೆ ಅಥವಾ ಅದನ್ನು ಬೆಳೆಸಿಕೊಳ್ಳಬೇಕೆಂಬ ಆಸಕ್ತಿಯೇ ಇರುವುದಿಲ್ಲ. ಇದಕ್ಕೆ ತದ್ವಿರುದ್ಧ ಸೋಮಶೇಖರರು. 'ಜನರೆಂದರೆ ಕೆಲವರಿಗೆ ಅಲರ್ಜಿ, ನನಗೆ ಎನರ್ಜಿ' ಎನ್ನುವುದು ಅವರ ಮಾತು. ಇದರ ಜೊತೆಗೆ ಯಾವುದೇ ಪರಿಸ್ಥಿತಿಯಲ್ಲಿ ಎಂಥ ಕೆಲಸವನ್ನಾದರೂ ನಿಭಾಯಿಸಬಲ್ಲ ಆತ್ಮವಿಶ್ವಾಸ, ಸಾಮರ್ಥ್ಯ ಅವರಿಗಿರುವುದರಿಂದ ತಾವೊಮ್ಮೆ ಅಂದುಕೊಂಡರೆ ತೀರಿತು, ಎಂಥಾ ಕೆಲಸವನ್ನೂ ಮಾಡಿಯೇ ತೀರುತ್ತಾರೆ.

❑



## ಕವಿ ಜರಗನಹಳ್ಳಿ ಶಿವಶಂಕರ

ವಶೀಕರಣದ ಮಾತುಗಾರ. ದಕ್ಷ ಆಡಳಿತಗಾರ. ವೃತ್ತಿ ಮತ್ತು ಪ್ರವೃತ್ತಿಯ ಮಧ್ಯೆ ಸಮತೂಕ ಕಾಪಾಡಿಕೊಂಡ ಬಹುಮುಖಿ. ಪ್ರತಿಭಾಸಂಪನ್ನ, ವಿನಯ ಸಂಪನ್ನ. ತುಂಬಿದ ಕೊಡ. ವಚನ ಸಾಹಿತ್ಯ ವಲ್ಲಭ. ಈ ನಾಡಿನ ಬಹುಮುಖ್ಯ ಸಾಂಸ್ಕೃತಿಕ ಹರಿಕಾರ. ಕ್ರಿಯಾತ್ಮಕವಾಗಿ ಮುನ್ನಡೆದಿರುವ ಈ ಸಾಹಿತ್ಯ, ಸಮಾಜ ಸೇವೆ, ಸಂಸ್ಕೃತಿಗಳ ಹರಿವಿನಲ್ಲೇ ಬದುಕಿನ ಹೆಜ್ಜೆ ಸವೆಸಿದ ಇವರಿಗೆ ಬೆಂಗಳೂರಿನಲ್ಲೊಂದು ಸಾಮಾಜಿಕ ಸಮ್ಮಾನ. ಆ ಹೊತ್ತಿಗಿದೊಂದು ನುಡಿ ಚಿತ್ತಾರ...

ತಮ್ಮ ವಿಶಿಷ್ಟ ವಾಗ್ವೈಖರಿಯಿಂದ ನಾಡಿನಾದ್ಯಂತ ಪ್ರಸಿದ್ಧವಾಗಿರುವವರು ಡಾ. ಸಿ. ಸೋಮಶೇಖರ ಅವರು. ವಿದ್ಯಾರ್ಥಿ ಜೀವನದಿಂದಲೇ ಶಾಲಾ ಕಾಲೇಜುಗಳ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ ನೂರಾರು ಬಹುಮಾನಗಳನ್ನು ಗಳಿಸಿಕೊಂಡವರು.

ಸಿ. ಸೋಮಶೇಖರರವರು ಭಾಗವಹಿಸುವ ಚರ್ಚಾಸ್ಪರ್ಧೆಗಳಲ್ಲಿ ಬಹುಮಾನ ಇವರಿಗೆ ಕಟ್ಟಿಟ್ಟ ಬುತ್ತಿ ಎಂಬ ನಂಬಿಕೆ ಜನಜನಿತವಾಗಿತ್ತೆಂದು ಅವರ ಸ್ನೇಹಿತರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಬಹುಮಾನವಾಗಿ ಬಂದ ಹಣವನ್ನು ಮತ್ತು ಗೆದ್ದ ಫಲಕಗಳನ್ನು ಕೆಲವೊಮ್ಮೆ ಮಾರಾಟ ಮಾಡಿ, ಆ ಹಣವನ್ನು ವಿದ್ಯಾಭ್ಯಾಸಕ್ಕೆ ಬಳಸಿಕೊಂಡಿರುವ ಕಷ್ಟದ ದಿನಗಳ ನಿದರ್ಶನಗಳನ್ನು ಅವರು ನೆನಪು ಮಾಡಿಕೊಳ್ಳುತ್ತಾರೆ.

ನನ್ನ ಬದುಕಿನಲ್ಲಿ ನನ್ನ ಮಾತೇ ನನ್ನ ಮತ್ತೋರ್ವ ಮಮತೆಯ ಮಾತೆಯಾಗಿ ಸಲಹುತ್ತಿರುವುದಾಗಿ ನಂಬಿದ್ದಾರೆ. ಇವರ ಚರ್ಚಾಸ್ಪರ್ಧೆಯ ಮಾತುಗಾರಿಕೆಯನ್ನು ಲಂಕೇಶರು ಮುಕ್ತವಾಗಿ ಮೆಚ್ಚುಗೆ ಸೂಚಿಸುತ್ತಿದ್ದದ್ದೂ ಇದೆ.

❑



## ಅಕ್ಕ ಡಾ। ಗಂಗಾಂಬಿಕೆ

ಸಿ. ಸೋಮಶೇಖರ ಅಣ್ಣನವರು ತಮ್ಮ ಜೀವನದ ಸಾಧನೆಯೇ ವೈಚಾರಿಕ ಚಿಂತನೆಯೆಂದು ಭಾವಿಸಿ ವೈಚಾರಿಕ ಕ್ರಾಂತಿಗಾಗಿ ಹೋರಾಡುತ್ತಿರುವವರು. ಇದನ್ನೇ ನಾವು ಅವರ ಹಲವು ಚಿಂತನಾತ್ಮಕ ಕೃತಿಗಳಲ್ಲಿ ಕಾಣಬಹುದು.

ಕ್ರಿಯೆಯೇ ಜ್ಞಾನ, ಅಜ್ಞಾನವೆ ಕ್ರಿಯೆ, ಜ್ಞಾನವೆಂದಡೆ ತಿಳಿಯುವುದು, ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು. ಪರಸ್ತ್ರೀಯ ಭೋಗಿಸಬಾರದೆಂಬುದೆ ಜ್ಞಾನ;ಅದರಂತೆ ಆಚರಿಸುವುದೇ ಕ್ರಿಯೆ. ಅರಿತು ಆಚರಿಸದಿದ್ದಡೆ ಅದೇ ಅಜ್ಞಾನ ನೋಡಾ, ಕೂಡಲಚೆನ್ನಸಂಗಮದೇವಾ.

ಪರಿಪೂರ್ಣವಾದ ಜೀವನದ ಬಾಳಿನಗುರಿ ಕೇವಲ ವಿಚಾರವೇ ಅಲ್ಲ. ಆ ವಿಚಾರಗಳನ್ನು ಆಚಾರದಲ್ಲಿ ತರುವುದರಲ್ಲಿದೆ ಎಂಬ ಶರಣರ ಅನುಭಾವ ಸಾಹಿತ್ಯದ ಸಾರವನ್ನು ಅರಗಿಸಿಕೊಂಡು ಬಾಳುತ್ತಿರುವವರು ಅಣ್ಣನವರು.

ಸಿ. ಸೋಮಶೇಖರ ಅಣ್ಣನವರು ಕ್ರಿಯಾಶೀಲ ಅಧಿಕಾರಿಯಾಗಿ ಯಾವ ವೇದಿಕೆಯೇ ಇರಲಿ ವಚನ ಹೇಳದೆ ತಮ್ಮ ಉಪನ್ಯಾಸ ಮುಗಿಸುವವರಲ್ಲ. ಅವರು ಒಮ್ಮೆ ನಮ್ಮ ಆಶ್ರಮದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ತಮ್ಮ ಉಪನ್ಯಾಸದಲ್ಲಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು ಬರೆದ "ಬಸವೇಶ್ವರರಿಗೆ" ಎಂಬ ಕವನ. "ನೀನಲ್ಲ ಏಕಾಂಗಿ, ನೀನಲ್ಲ ಯಾವುದೋ ದೂರ ಗುಹಾವಾಸದೇಕಾಂತದಲಿ ಬದುಕಿದ ಸಿದ್ಧ...

ಅವರ ಕಂಚಿನ ಕಂಠದಿಂದ ಹೇಳುತ್ತಿದ್ದರೆ ಕೇಳುಗರಾದ ನಮ್ಮ ಮೈಮೇಲಿನ ಕೂದಲು ನಿಮಿರುತ್ತಿದ್ದವು. ಹತ್ತು ವರ್ಷಗಳ ಹಿಂದೆ ಕೇಳಿದ ಈ ಪದ್ಯ ನನ್ನ ಮನದಿಂದ ಮಾಸಿಲ್ಲ.

❑



## ಕವಿ ಬಿ.ಆರ್. ಲಕ್ಷ್ಮಣರಾವ್

ಡಾ. ಸಿ. ಸೋಮಶೇಖರರು ನಿಜಕ್ಕೂ ಒಬ್ಬ ಅಪರೂಪದ ವ್ಯಕ್ತಿ. ಅವರ ಬಯೊಡೇಟಾ ನೋಡಿದರೆ ಎಂಥವರಿಗೂ ಅಚ್ಚರಿಯಾಗಬೇಕು. ಒಬ್ಬ ವ್ಯಕ್ತಿ ತನ್ನ ಒಂದೇ ಜೀವಿತಾವಧಿಯಲ್ಲಿ ಇಷ್ಟೆಲ್ಲ ದೊಡ್ಡ ಓದನ್ನು ಓದಿ, ಇಷ್ಟೆಲ್ಲ ದೊಡ್ಡ ಅಧಿಕಾರಸ್ಥಾನಗಳನ್ನು ಅಲಂಕರಿಸಿ, ಇಷ್ಟು ಸರಳವಾಗಿ, ವಿನಯ ಸಜ್ಜನಿಕೆ ಮತ್ತು ಸ್ನೇಹಶೀಲತೆಗಳ ಮೂರ್ತರೂಪವಾಗಿ ಇರಲು ಸಾಧ್ಯವೇ? ಆದರೂ ಇದು ನಿಜ.

ನಾನು ಸೋಮಣ್ಣ ಅವರನ್ನು (ಹಾಗೆ ಕರೆದರೇನೇ ಅವರಿಗೆ ಇಷ್ಟ) ಮೊಟ್ಟಮೊದಲು ಭೇಟಿಯಾದದ್ದು ಯಾವುದೋ ಒಂದು ಸ್ನೇಹಕೂಟದಲ್ಲಿ. ಅದೇ ಮೊದಲ ಪರಿಚಯ. ನಾನು ಒಬ್ಬ ಕವಿಯೆಂದು ಅವರಿಗೆ ಗೊತ್ತಿತ್ತು. ಆದರೆ ಅವರು ಯಾರೆಂದು ನನಗೆ ಗೊತ್ತಿರಲಿಲ್ಲ.

ಯಾರೋ ಕಾವ್ಯ ಮತ್ತು ಸಂಗೀತದ ಅಭಿಮಾನಿ ಇರಬಹುದೆಂದು ಭಾವಿಸಿದ್ದೆ. ಅಷ್ಟೊಂದು ಸರಳವಾಗಿತ್ತು ಅವರ ನಡವಳಿಕೆ. ಆ ನಂತರವಷ್ಟೇ ಅವರ ನಿಜರೂಪದ ದರ್ಶನ ನನಗಾದದ್ದು. ಆದರೂ ಅವರು ನನ್ನೊಂದಿಗೆ ಮುಂದೆಯೂ ಒಬ್ಬ ಆತ್ಮೀಯ ಗೆಳೆಯನ ಸಲಿಗೆಯಲ್ಲೇ ಮುಂದುವರಿದರು.

ಸೋಮಶೇಖರರು ತಾವು ಜವಾಬ್ದಾರಿ ವಹಿಸಿಕೊಂಡ ಎಲ್ಲ ಉನ್ನತ ಸರ್ಕಾರಿ ಇಲಾಖೆಗಳಲ್ಲೂ ಒಬ್ಬ ದಕ್ಷ, ಪ್ರಾಮಾಣಿಕ ಹಾಗೂ ಜನಪರ ಅಧಿಕಾರಿಯಾಗಿ ಖ್ಯಾತಿ ಗಳಿಸಿದ್ದಾರೆ. ಹಾಗೆಯೇ ಒಬ್ಬ ಸ್ನೇಹಶೀಲ ವ್ಯಕ್ತಿಯಾಗಿ ಸಕಲರಿಗೂ ಆಪ್ತರಾಗಿದ್ದಾರೆ. ಇದು ವಿರಳ ಗುಣ.

❑

## ಎಚ್. ಡುಂಡಿರಾಜ್



ಸೋಮಶೇಖರ ಅಂದಾಕ್ಷಣ
ಮೊದಲು ನೆನಪಾಗುವುದು ಅವರ ನಗೆ
ಹತ್ತಾರು ವರ್ಷಗಳ ಹಿಂದೆ
ಮಂಗಳೂರಲ್ಲಿ ಕಂಡ ಆ ನಗುಮುಖ
ದಶಕಗಳು ಉರುಳಿದರೂ ಹಾಗೇ ಇದೆ
ಅವರು ಇರುವುದೇ ಹಾಗೆ
ಸ್ನೇಹದ ಕಂಪು ಸೂಸುತ್ತಲೇ ಇರುವ
ನಗೆ ಸಂಪಿಗೆ!

ಸೋಮಶೇಖರ ಅಂದಾಕ್ಷಣ
ನೆನಪಾಗುವುದು ಅವರ ನಿರರ್ಗಳ ಭಾಷಣ
ವಚನ, ಕವನ, ನುಡಿಮುತ್ತುಗಳಿಂದ
ಸಿಂಗರಿಸಿದ ಮಾತಿನ ಮಂಟಪ
ಝುಗಝುಗಿಸುವ ಜ್ಞಾನ ಜ್ಯೋತಿ
ಕೇಳಿದವರು ಮೆಚ್ಚಿ ತಲೆದೂಗುವಂಥ
ಹಾವಭಾವ, ಮಾತಿನ ಮೋಡಿ
ವಿಷಯ ಪರಿಣತಿ

ಸೋಮಶೇಖರ ಅಂದಾಕ್ಷಣ
ಕಣ್ಣಮುಂದೆ ಬರುವುದು ಅವರ
ಅಪರೂಪದ ಆದರ್ಶ ವ್ಯಕ್ತಿತ್ವ
ಅಧಿಕಾರದ ಅಮಲು ಏರದ
ಗತ್ತು ತೋರದ, ತೆರೆದ ಮನದ ಸಜ್ಜನ
ಸುಸಂಸ್ಕೃತ, ಸಂಭಾವಿತ, ಸ್ನೇಹಿತ
ಭಾಷೆ, ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿಯ
ಪೋಷಣೆಗೆ ಎಡೆಬಿಡದೆ ದುಡಿದ ಸಹೃದಯ

❑

## ಪ್ರೊ॥ ಜಿ.ಹೆಚ್. ಹನ್ನೆರಡುಮಠ

ಕಂಠವೇ ಗಂಟೆಯಾಗಿ, ಮಾತು ಟಂಠಣಿಸಿದರೆ ಆ ವ್ಯಕ್ತಿ ಯಾರೆಂದು ಕೇಳುವುದೇ ಬೇಡ! ನಿರರ್ಗಳವಾಗಿ ಸಾಗುವ ಮಾತಿನ ಆಳ ಆಳಕ್ಕೆ ಇಳಿದಾಗ; ಆ ಮಾತಿನ ಒಡಲ ಓದು–ಅಧ್ಯಯನ–ಅನುಸಂಧಾನ–ಅರುಹಿನ ಬೆಲ್ಲ–ಬೆಳಸಿ–ಬೆಳದಿಂಗಳು ಸವಿದಾಗ; ಹೌದು... ಇದು ಡಾ॥ ಸಿ. ಸೋಮಶೇಖರ ಅವರದೇ ಮಾತು! ಓ... ಆ ಮಾತು ಮಾತಲ್ಲ... ಮಾಲಿಂಗ!

ಭಾರೀ ದೊಡ್ಡ ಹುದ್ದೆಯ ಗದ್ದುಗೆಯ ಮೇಲೆ ಕುಂತವರು ಎಷ್ಟೋ ಸಲ ಕನ್ನಡ ಮಾತು ಬಾರದೇ; ನಡು ನಡುವೆ ಇಂಗ್ಲಿಷಿನ ಕುಲಾಯಿ–ಕುಂಚಿಗಿ ಸೇರಿಸುತ್ತಿರುವುದೇ ಹೆಚ್ಚು. ಅತ್ತ ಇಂಗ್ಲಿಷಿನ ಪ್ರೀತಿ, ಇತ್ತ ಕನ್ನಡದ ಭೀತಿ... ಇದೇ ಭಾಷಾ ಮಾಧ್ಯಮದ ಫಜೀತಿ!ಕನ್ನಡಕ್ಕೆ ಖಡಕ್ಕು ಸ್ಥಾನಮಾನ ಕೊಟ್ಟವರು ಬೆರಳೆಣಿಕೆಯ ಮೇಲೆ! ಈ ಕಠಿಣ ಸಂದರ್ಭದಲ್ಲಿ ನುಡಿಯ ಗಾರುಡಿಗ ಡಾ॥ ಸೋಮಶೇಖರ ಅವರ ನೆನಪು ತನ್ನಿಂದ ತಾನೇ ಚಿಮ್ಮುವ ಸ್ನೇಹ ಕಾರಂಜಿ! ಕನ್ನಡದ ಕೆನೆ ಬಟ್ಟಲದ ಬೆಲ್ಲ–ಕೊಬ್ಬರಿಯ ರುಚಿ ಬಲ್ಲವನೇ ಬಲ್ಲ. ಕನ್ನಡಕ್ಕಿರುವ ತನ್ನದೇ ಆದ ಸಹಜ ಕಾವ್ಯ ಧ್ವನಿ, ಒಕ್ಕಲಿನ ಹಕ್ಕಲು, ಹೆಚ್ಚು–ಕಸುವಿನ ಕಸುಬುಗಾರಿಕೆ ಇರುವವರು ಅಪರೂಪ. ಡಾ॥ ಸೋಮಶೇಖರ ಅವರು ಒಮ್ಮೆ ಮಾತನಾಡಲು ಶುರು ಮಾಡಿದರೆ ಅಲ್ಲಿ ವಿಚಾರ ಲೋಕದ ಜೀಕು–ಜೋಕಾಲಿ ಖಂಡಿತ. ಇವರು ಕೆರೆ ದಂಡೆಯ ಮೇಲೆ ಕುಂತು ಸಾಹಿತ್ಯ ಓದಿದವರಲ್ಲ; ಕೆರೆಯಲ್ಲಿ ಮುಳುಗಿ, ಈಜಿ, ಮೇಲೆದ್ದ ಕನ್ನಡದ ಹಂಸಚೇತನ.

'ಓದಿ ಬ್ರಾಹ್ಮಣನಾಗು, ಕಾದು ಕ್ಷತ್ರಿಯನಾಗು, ಶೂದ್ರ ವೈಶ್ಯನೇ ಆಗು ದುಡಿದು ಗಳಿಸಿ, ಏನಾದರೂ ಆಗು ನಿನ್ನೊಲವಿನಂತಾಗು, ಮೊದಲು ಮಾನವನಾಗು...' ಎಂಬ ಶಿಖರಧ್ವನಿ ಸಾರಿದಾಗಲೇ ಇವರಿಗೆ ತೃಪ್ತಿ! ❑



## ಡಾ. ಜಿ.ಜಿ. ರುದ್ರೇಶ್
### ಹೋಮಿಯೋಪತಿ ತಜ್ಞ

ನನಗೆ ಅವರ ಒಡನಾಟ ಎಂದಿನಿಂದ ಶುರುವಾಯ್ತು ಅಂತಾ ನೆನಪಿಲ್ಲ. ಬಹುಶಃ ಯಾವುದೋ ಸಮಾರಂಭದಲ್ಲಿ ಅಣ್ಣರ ವಚನದ ವ್ಯಾಖ್ಯಾನ ಕೇಳಿದ ನೆನಪು. ಅವರ ಕಂಚಿನ ಕಂಠ, ನಿಷ್ಕಲ್ಮಶ ನಗು, ಆಪ್ತತೆ ನನ್ನ ಮನ ಸೆಳೆದಿದ್ದವು. ಕನ್ನಡ ಭವನದಲ್ಲಿ ನನಗೊಂದು ಸನ್ಮಾನ, ಅವರದೇ ಬಳಗದಿಂದ. ಅಂದು ವೈಯಕ್ತಿಕ ಪರಿಚಯ. ಅಂದಿನಿಂದ ಆಗಾಗ್ಗೆ ಮಿಲನ ಕೂಟಗಳಲ್ಲಿ ಅವರ ಪತ್ನಿಯೊಂದಿಗೆ ಅವರ ಉಪಸ್ಥಿತಿಯಿರುತ್ತಿತ್ತು.

'ಏನ್ ಬ್ರದರ್' ಅಂತಾ ಅವರ ಆಪ್ತ ಅಪ್ಪುಗೆ ಮರೆಯಲು ಸಾಧ್ಯವಿಲ್ಲ. ಕೆ.ಎ.ಎಸ್. ಅಧಿಕಾರಿಯಾಗಿ, ಅನೇಕ ಹುದ್ದೆಗಳನ್ನು ಅಲಂಕರಿಸಿ, ಒಬ್ಬ ವ್ಯಕ್ತಿ ಹೀಗೂ ಇರಬಹುದೇ ಎಂಬುದನ್ನು ಅವರು 'ರೋಲ್ ಮಾಡಲ್' ಸಾಮಾಜಿಕ ಸಂಘಟನೆ, ಬಸವ ವೇದಿಕೆ ಮುಂತಾದ ಸಂಘಸಂಸ್ಥೆಗಳಿಂದ ಅವರ ನಿಜವಾದ ಸೇವೆ ಅನುಕರಣೀಯ.

ಐಎಎಸ್ ನಂತರ ಅವರು ತುಮಕೂರು ಡಿ.ಸಿ.ಯಾಗಿ ವರ್ಗವಾದ ಬಳಿಕ ಅವರ ಒಡನಾಟ ಸ್ವಲ್ಪ ಕಮ್ಮಿಯಾದರೂ ಜಿಲ್ಲಾಧಿಕಾರಿಯಾಗಿ ಗಳಿಸಿದ ಪ್ರೀತಿ, ವಿಶ್ವಾಸ ಇತ್ಯಾದಿಗಳ ಬಗ್ಗೆ ನನಗೆ ತಿಳಿದಿತ್ತು. ಅವರ ಜನಪ್ರಿಯತೆ ಎಷ್ಟಿತ್ತೆಂದರೆ ಮುಂದಿನ ಲೋಕಸಭಾ ಅಭ್ಯರ್ಥಿ ಎನ್ನುವ ಮಟ್ಟಿಗೆ ಹಬ್ಬಿತ್ತು. ಅವರ ಜನಪರ ಕಾಳಜಿ, ನಡೆಸಿದ ಜಿಲ್ಲಾ ಉತ್ಸವಗಳೇ ಇತರರಿಗೂ ಮಾದರಿ.

ಇತ್ತೀಚೆಗೆ ಅವರ ಮನೆಗೆ ಸಂತೋಷಕೂಟವೊಂದಕ್ಕೆ ಹೋದಾಗ ಅಲ್ಲಿದ್ದ ಫಲಕಗಳು, ಫೋಟೋಗಳಿಗೆ ಒಂದು ಪ್ರತ್ಯೇಕ ಕೊಠಡಿ ಮಾಡಿದ್ದನ್ನು ಕಂಡೆ. ರಾಜ್‌ಕುಮಾರ್‌ರಿಂದ ಹಿಡಿದು ರಾಷ್ಟ್ರಪತಿಗಳವರೆಗೆ, ಸಮಾಜದ ಎಲ್ಲಾ ಸ್ತರದ, ಗಣ್ಯಾತಿಗಣ್ಯರ ಜೊತೆಯ ಭಾವಚಿತ್ರಗಳು ಅವರ ಜನ ಮನ್ನಣೆಗೆ ಹಿಡಿದ ಕೈಗನ್ನಡಿ. ❑



## ಡಾ. ಎಂ. ಚಿದಾನಂದಮೂರ್ತಿ

ನಾನು ಡಾ. ಸಿ. ಸೋಮಶೇಖರ ಅವರನ್ನು ತಕ್ಕಮಟ್ಟಿಗೆ ಹತ್ತಿರದಿಂದ ಬಲ್ಲೆ. ಅವರು ಒಬ್ಬ ವಿದ್ಯಾವಂತ, ವಿದ್ವಾಂಸ, ಸಾಹಿತ್ಯ ಪ್ರೇಮಿ, ಸಾಂಸ್ಕೃತಿಕ ಚಿಂತಕ. ಅವರು ವಚನ ಸಾಹಿತ್ಯ ಸೇರಿದಂತೆ ಹಲವು ಕ್ಷೇತ್ರಗಳಿಗೆ ತಮ್ಮದೇ ಆದ ಮೌಲಿಕ ಕೊಡುಗೆಗಳನ್ನು ನೀಡಿದ್ದಾರೆ. ಅವುಗಳನ್ನು ಜನರು ಗುರುತಿಸಿದ್ದಾರೆ ಮತ್ತು ಅವರಿಗೆ ಆ ಮೂಲಕ ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಸಂದಿವೆ. ಹಂಪಿಯ ವಿಶ್ವವಿದ್ಯಾಲಯವು ಅವರ ವಚನಗಳಲ್ಲಿ ಸಾಮಾಜಿಕ ಚಿಂತನೆ ನಿಬಂಧಕ್ಕೆ ಡಿ.ಲಿಟ್ ಪದವಿ ನೀಡಿರುವುದು ವಿಶೇಷ ಗಮನಾರ್ಹವಾದುದು. ಅವರು ನಿರಂತರ ಚಿಂತನಶೀಲರು; ವಾಗ್ಮಿಗಳು– ಆಕರ್ಷಕವಾಗಿ ಅವರು ಮಾತನಾಡುವಂತೆ ಅವರು ಸ್ವತಂತ್ರ ಚಿಂತನಶೀಲತೆಯನ್ನು ಅಳವಡಿಸಿಕೊಂಡು ಸಾಮಾಜಿಕ ಬದಲಾವಣೆಗಳ ಬಗ್ಗೆ ದಿಟ್ಟವಾಗಿ ಮಾತನಾಡಿದ್ದಾರೆ; ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ.

ಅಷ್ಟೇ ಮುಖ್ಯ– ಈಗ ಅವರು ಐ.ಎ.ಎಸ್. ವರ್ಗದ ಹಿರಿಯ ಅಧಿಕಾರಿಗಳಾಗಿದ್ದಾರೆ. ಕರ್ನಾಟಕ ಸರ್ಕಾರದ ಹಲವು ಉನ್ನತ ಸ್ಥಾನಗಳಲ್ಲಿ ಅವರು ಕೆಲಸ ಮಾಡಿದ್ದಾರೆ, ಆ ವಿವಿಧ ಉನ್ನತ ಸ್ಥಾನಗಳ ಪಟ್ಟಿಯೇ ಬೆರಗುಗೊಳಿಸುತ್ತದೆ. ಪ್ರಾಮಾಣಿಕ ಅಧಿಕಾರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅವರು ದೂರದರ್ಶನ ಮೊದಲಾದ ಸಮೂಹ ಮಾಧ್ಯಮಗಳಲ್ಲೂ ಕಾಣಿಸಿಕೊಂಡು ಜನಮನ ಗೆದ್ದಿದ್ದಾರೆ. ಅತ್ಯಂತ ಪ್ರಾಮಾಣಿಕ ವಿನಯಶೀಲರು ಅವರು.

ಸಾಹಿತ್ಯ–ಸಂಸ್ಕೃತಿ ಮತ್ತು ಆಡಳಿತ–ಅಧಿಕಾರ ಇವುಗಳ ಸಮ್ಮಿಲನ ಕಂಡುಬರುವುದು ಅವರಂತಹ ತೀರ ವಿರಳ ಕೆಲ ವ್ಯಕ್ತಿಗಳಲ್ಲಿ ಮಾತ್ರ.

❑



## ಎಸ್.ಎ. ಚಿನ್ನೇಗೌಡ

1986ರ ಒಂದು ಸಂದರ್ಭ. ಮಂಗಳೂರಿನಲ್ಲಿ ಅಣ್ಣಾವ್ರ ಸಂಗೀತ ಸಂಜೆ ಏರ್ಪಾಡಾಗಿತ್ತು. ಕಿಕ್ಕಿರಿದಿದ್ದ ಜನಸಂದಣಿ. ಒಬ್ಬ ಯುವ ಅಧಿಕಾರಿ ಸ್ವಾಗತ ಭಾಷಣ ಮಾಡಲು ವೇದಿಕೆಯನ್ನೇರಿದರು. ಕ್ಷಣ ಮಾತ್ರದಲ್ಲಿ ಇಡೀ ಸಭೆ ನಿಶ್ಯಬ್ದ. ತಮ್ಮ ಕಂಚಿನ ಕಂಠದಲ್ಲಿ ಸುಂದರವಾದ ಭಾಷೆಯಲ್ಲಿ ರಾಜ್‌ಕುಮಾರ್ ಅವರ ಸಮಗ್ರ ಪರಿಚಯವನ್ನು ಕೇಳುಗರ ಮನಸೂರೆಗೊಳ್ಳುವಂತೆ ವಿವರಿಸಿದರು. ಇದನ್ನು ಕೇಳುತ್ತಿದ್ದಂತೆಯೇ ಅಣ್ಣಾವ್ರು ನನ್ನನ್ನು ಹತ್ತಿರಕ್ಕೆ ಕರೆದು 'ಚಿನ್ನಣ್ಣಾ, ಇದ್ಯಾರು ಇಷ್ಟು ಚೆನ್ನಾಗಿ ಕನ್ನಡ ಮಾತಾಡ್ತಿದ್ದಾರೆ, ಕೇಳು?' ಎಂದರು. ವಿಚಾರಿಸಿದಾಗ ತಿಳಿಯಿತು ಆ ವ್ಯಕ್ತಿ ಮಂಗಳೂರಿನ ಉಪವಿಭಾಗಾಧಿಕಾರಿಯಾಗಿದ್ದ ಸಿ. ಸೋಮಶೇಖರ ಅಂತ. ಆ ಕ್ಷಣದಿಂದ ಪ್ರಾರಂಭವಾಯಿತು ನಮ್ಮ ಅವರ ಬಾಂಧವ್ಯ ಮೂರು ದಶಕಗಳಿಂದ ನಿರಂತರವಾಗಿ ಮುಂದುವರೆದಿದೆ ಆ ವಾತ್ಸಲ್ಯದ ಸೆಲೆ. ಆಶ್ಚರ್ಯವೆಂದರೆ ಅಣ್ಣಾವ್ರ ಎಷ್ಟೋ ಗುಣಗಳನ್ನು

ಸಿ. ಸೋಮಶೇಖರ ಸಹಜವಾಗಿಯೇ ಮೈಗೂಡಿಸಿಕೊಂಡಿರುವುದು. ಸರಳತೆ, ಸನ್ನಡತೆ, ಸನ್ಮಾರ್ಗದುರಂಧರರಾಗಿರುವ ಸೋಮಶೇಖರರನ್ನು ದಿಟ್ಟಿಸುತ್ತಾ ಕೆಲವೊಮ್ಮೆ ಮಾತೇ ಮರೆತು ಮೌನವಾಗಿ ಸಂತೋಷವನ್ನು ಅನುಭವಿಸುತ್ತೇನೆ. ಅವರ ಮಾತು, ಭಾವನೆ, ವರ್ತನೆ ಎಲ್ಲವೂ ಅದೆಷ್ಟು ಸ್ವಾಭಾವಿಕ ! ಎಲ್ಲೂ ಎಳ್ಳಷ್ಟೂ ಕಪಟವಿಲ್ಲ, ತೋರಿಕೆಯಿಲ್ಲ, ಸ್ವಾರ್ಥವಿಲ್ಲ. ಎಷ್ಟು ದೊಡ್ಡ ಅಧಿಕಾರಿಯಾಗಿದ್ದರೂ ಒಂದಿಷ್ಟೂ ಹಮ್ಮಿಲ್ಲ, ಬಿಮ್ಮಿಲ್ಲ, ಅಹಂ ಇಲ್ಲ! ಇಂಥ ಸ್ನೇಹಿತರು ಅದೆಷ್ಟು ಜನರಿಗೆ ಸಿಕ್ಕಾರು? ಆತ್ಮೀಯ ಮಿತ್ರ ಸೋಮಶೇಖರರವರ ಬಗ್ಗೆ ಏನೇ ಹೇಳಿದರೂ ಏನೇ ಬರೆದರೂ ನಮಗೆ ತೃಪ್ತಿಯಾಗುವುದಿಲ್ಲ.

❑



## ಟಿ.ಎಸ್. ನಾಗಾಭರಣ

ಅಂದು ಬೆಂಗಳೂರಿನ ಬಳಿಯ ಹೊಸಕೋಟೆಯ ಶಾಲೆಯೊಂದರಲ್ಲಿ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಹೋದಮೇಲೆಯೇ ಅರಿವಾದದ್ದು ಡಾ.ಸಿ.ಸೋಮಶೇಖರರ ಅವ್ಯಾಹತ ಮಾತುಗಾರಿಕೆ. ಮಂತ್ರಮುಗ್ಧನಂತೆ ಕೇಳುತ್ತಾ ಕುಳಿತೆ. ನನ್ನ ಮಾತುಗಳು ಮೌನವಾದವು. ಅಂದಿನಿಂದ ಇಂದಿನವರೆಗೆ ಸುಮಾರು ಹದಿನೈದು ವರ್ಷಗಳ ನಮ್ಮ ಒಡನಾಟದಲ್ಲಿ ಸದಾ ನನ್ನೊಡನೆ ಸ್ಪಂದಿಸುತ್ತಿರುವ ನನ್ನ ಸ್ಪೂರ್ತಿದಾತರಲ್ಲಿ ಒಬ್ಬರು ಡಾ.ಸಿ.ಸೋಮಶೇಖರ.

ಸ್ವಾಮಿ ಸೋಮಶೇಖರರೇ, ನಿಮಗೆ ಈ ದಿಲ್‌ದಾರ್‌ತನ ಹುಟ್ಟಿನಿಂದಲೇ ಬಂದದ್ದೋ ಅಥವಾ ನಂತರದ ದಿನಗಳಲ್ಲಿ ರೂಢಿಸಿಕೊಂಡದ್ದೆ? ಗೊತ್ತಿಲ್ಲ. ಆದರೆ ಇಷ್ಟಂತೂ ಸತ್ಯ. ನೀವು ಬೆಳೆವ ಸಿರಿ ಮೊಳಕೆಯಲ್ಲಿಯೇ ಎಂಬುದನ್ನು ಸಾಕ್ಷೀಕರಿಸಿದ್ದೀರಿ. ಜಯದೇವ ಹಾಸ್ಟೆಲ್‌ನ ನಿಮ್ಮ ಸಹಪಾಠಿಗಳು, ಸ್ನೇಹಿತರು ಇಂದಿಗೂ ನಿಮ್ಮ ಆ ವಾಕ್ಪಟುತ್ವವನ್ನ, ಸಂಘಟಕ ಶಕ್ತಿಯನ್ನ, ಸ್ನೇಹ ಮನೋಭಾವವನ್ನ ನೆನೆಸಿಕೊಂಡು ಹಿಗ್ಗುತ್ತಾರೆ. ಈ ಹಿಗ್ಗಿಸುವ ಗುಣವೇ ನಿಮ್ಮನ್ನ ನಿಮ್ಮ ಪ್ರಭಾವಲಯಕ್ಕೆ ಬಂದ ನಮ್ಮಂಥವರನ್ನ ನಿಮ್ಮ ಪ್ರೀತಿಯ ಫೆವಿಕಾಲ್ ಹಾಕಿ ಬೆಸುಗೆ ಮಾಡಿದ್ದು.

ನಿಮ್ಮ ಆತ್ಮಸ್ಥೈರ್ಯಕ್ಕೆ ಯಾವುದೂ ಸವಾಲಲ್ಲ ಎಂಬುದನ್ನು ಹಂತ ಹಂತದಲ್ಲೂ ಪ್ರಮಾಣೀಕರಿಸಿದವರು ನೀವು. ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ಉತ್ತರಿಸಿದ ಪ್ರಪ್ರಥಮ ಕನ್ನಡಿಗನಾಗಿ, ನಿಮ್ಮ ಆಡಳಿತ ಸೇವಾ ಅವಧಿಯ ಉದ್ದಕ್ಕೂ ಹುದ್ದೆಯಿಂದ ಹುದ್ದೆಗೆ ಜನಪರವಾಗಿ, ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿದವರು ನೀವು. ನಿಮಗೆ ಶುಭವಾಗಲಿ.

❑



## ನಾಗತಿಹಳ್ಳಿ ಚಂದ್ರಶೇಖರ್

ಅಧಿಕಾರ ಮತ್ತು ಪ್ರಭುತ್ವಗಳಿಗೆ ವಿನಯ ಮತ್ತು ಸಾಮಾಜಿಕ ಬದ್ಧತೆಯನ್ನು ತಂದುಕೊಡಲು ಸಾಹಿತ್ಯ ಮತ್ತು ಸಂಸ್ಕೃತಿಗಳು ಬಹುಮುಖ್ಯವಾದ ವಿವೇಕಗಳು. ಓದಿಕೊಂಡ ಮನುಷ್ಯ ಪ್ರಬುದ್ಧನಾಗಿ ಯೋಚಿಸಬಲ್ಲ. ತನ್ನ ಬಳಿ ಇರುವ ಸಿಂಹಾಸನ, ಕತ್ತಿ, ಗುರಾಣಿ, ಬೆಳ್ಳಿ ರಥಗಳು ಅಲ್ಪಾಯು ಎಂದು ಅರಿತವನಾಗಬಲ್ಲ. ಇರುವ ಅವಧಿಯಲ್ಲಿ ಏನಾದರೂ ಒಂದಿಷ್ಟು ಜನಹಿತ ಕೆಲಸ ಮಾಡಬೇಕು ಎಂಬ ಜಾಗೃತ ಸ್ಥಿತಿಯಲ್ಲಿರಬಲ್ಲ. ದಕ್ಕಿರುವ ಅಧಿಕಾರ, ಮೆರವಣಿಗೆಗಾಗಿ ಅಲ್ಲ; ಅದು ಆಗಿರುವ ಸಾಮಾಜಿಕ ಗಾಯಗಳಿಗೆ ಮುಲಾಮು ಹಚ್ಚಲು ಇರುವ ಶುಶ್ರೂಷಕನ ಮತ್ತು ದಾದಿಯ ತಾಳ್ಮೆಯ ಸೇವಾ ಕೈಂಕರ್ಯ ಎಂಬ ಅರಿವಿನಿಂದ ತಾನಿದ್ದ ಹುದ್ದೆ, ತಾನಿರುವ ಊರಿನಲ್ಲಿ ಅಹರ್ನಿಶಿ ದುಡಿಯಬಲ್ಲ, ಅಧಿಕಾರ ಮತ್ತು ಪ್ರಭುತ್ವಗಳ ದುರ್ಲಾಭ ಪಡೆಯಲು ಮಾತ್ರವೇ ಹತ್ತಿರ ಸುಳಿದಾಡಬಲ್ಲ ವ್ಯಕ್ತಿಗಳನ್ನು ಗುರುತಿಸಿ ದೂರ ಇಡಬಲ್ಲ, ಈ ಎಲ್ಲ ಬಗೆಯ ಶಕ್ತಿಯನ್ನೂ ಸಾಹಿತ್ಯ–ಸಂಸ್ಕೃತಿಗಳು ತಂದುಕೊಡುತ್ತವೆ.

ಡಾ. ಸಿ. ಸೋಮಶೇಖರರವರು ಇಪ್ಪತ್ತಕ್ಕೂ ಹೆಚ್ಚು ಇಲಾಖೆ, ಹುದ್ದೆ, ಅಧಿಕಾರಗಳಲ್ಲಿದ್ದರೂ ಅವರನ್ನು ಎಲ್ಲರೂ ಗುರುತಿಸುವುದು "ಸಂಸ್ಕೃತಿ ಸೋಮಣ್ಣ" ಎಂದೇ. ನಾವೆಲ್ಲ ಅವರನ್ನು ಅಧಿಕಾರಿಯಾಗಿ ಕಂಡದ್ದೇ ಅಲ್ಪ. ಸಾಹಿತ್ಯ ಸಮ್ಮೇಳನಗಳಲ್ಲೋ, ವಿಚಾರ ಗೋಷ್ಠಿಗಳಲ್ಲೋ, ಸಂಸ್ಕೃತಿ ಶಿಬಿರಗಳಲ್ಲೋ ಭೇಟಿಯಾಗುತ್ತಿದ್ದುದು. ನಾನಾ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ಸೋಮಣ್ಣನವರು ಎಲ್ಲಿದ್ದರೂ ಆಪ್ತ. ಯಾವ ಊರಿನಲ್ಲಿದ್ದರೂ ನಮ್ಮವ ಅನಿಸಿಕೊಂಡಿದ್ದು, ಅವರ ವ್ಯಕ್ತಿತ್ವದಲ್ಲಿರುವ ಸ್ನೇಹ, ಸರಳತೆ ಮತ್ತು ಹಸನ್ಮುಖಿ ಗುಣದಿಂದ.

❑



## ಮಾಸ್ಟರ್ ಹಿರಣ್ಣಯ್ಯ

ನನ್ನ ಹಾಗೂ ಡಾ. ಸಿ. ಸೋಮಶೇಖರ ಅವರ ಪರಿಚಯ ಕೇವಲ ಮೈತ್ರಿಯ ಮಟ್ಟಿಗೇ ಉಳಿದಿಲ್ಲ. ಅದು ಯಾವುದೋ ಜನ್ಮದ ಅನುಬಂಧ ರೂಪದ ಏಕೋದರದ ಪುನರಾವರ್ತಿಯಂತೆ ಬೆಳೆದುಬಂದಿದೆ. ನಾನವರನ್ನು ಪ್ರಥಮತಃ ಭೇಟಿಯಾದದ್ದು, ಯಾವುದೋ ಒಂದು ಸಭೆಯಲ್ಲಿ. ಇಬ್ಬರೂ ಮುಖ್ಯ ಅತಿಥಿಗಳಾಗಿದ್ದ ಸಭೆಯದು. ಬಹುಶಃ ರಾಜ್ಯೋತ್ಸವದ್ದೇ ಇರಬಹುದು. ಅಂದೇ ಅವರು ನನ್ನನ್ನು ನಡೆಸಿಕೊಂಡ ರೀತಿ, ನನ್ನಲ್ಲಿ ಆ ಭಾವನೆ ಮೂಡಿಸಿತು. ಅವರು ನನ್ನನ್ನು ಅತ್ಯಂತ ಆದರದಿಂದ ಡಯಾಸಿಗೆ ಕರೆದುಕೊಂಡು, ಪಕ್ಕದಲ್ಲೇ ಕೂಡಿಸಿಕೊಂಡು ಬಹು ಆತ್ಮೀಯವಾಗಿ ನನ್ನ ನಾಟಕಗಳನ್ನು ಮತ್ತು ಅದರಲ್ಲಿನ ನನ್ನ ನೇರ ಮಾತುಗಳಿಂದ ತಪ್ಪಿತಸ್ಥರನ್ನು, ಅವರು ಯಾರೇ ಆಗಲಿ, ಅವರ ಹೆಸರನ್ನು ಹೇಳಿಯೇ ಟೀಕಿಸುತ್ತಿದ್ದ ಎದೆಗಾರಿಕೆಯನ್ನು ಮೆಚ್ಚಿಕೊಂಡ ರೀತಿಯಿಂದ ಇವರೂ ಒಬ್ಬ ಮಾಮೂಲಿ ನಮ್ಮ ನಾಟಕಗಳ ಪ್ರೇಮಿಯಿರಬಹುದೆಂದು ಮಾತ್ರ ಊಹಿಸಿದ್ದೆ ನನ್ನ ನಂತರ ಮತ್ತೊಬ್ಬರು ಭಾಷಣ ಮಾಡುವುದು, ಮಾಡಿದರೂ ಜನಮನವನ್ನು ನನಗಿಂತ ಜೋರಾಗಿ ಅವರತ್ತ ಸೆಳೆದುಕೊಳ್ಳುವುದು ಅಷ್ಟು ಸುಲಭ ಸಾಧ್ಯವಲ್ಲವೆಂದೇ ಭಾವಿಸಿದ್ದೆ. ಆದರೆ ಶ್ರೀ ಸೋಮಣ್ಣನವರ ಭಾಷಣ, ನನ್ನ ಸೊಕ್ಕನ್ನಿಳಿಸಿ, ನನ್ನ ಮಾತುಗಳನ್ನು ಪ್ರೇಕ್ಷಕರ ನೆನಪಿನಿಂದ ಅಳಿಸಿಹಾಕಿ, ತಮ್ಮ ಅಮೃತಬಿಂದುಪೂರಿತ ವಾಣಿಯನ್ನುಳಿಸಿದ ಪರಿ, ನನಗೆ ನಾನೇ ಎಂದೋ ಬರೆದಿದ್ದ ನನ್ನ ಕವನದ ಸಾಲುಗಳನ್ನು ನೆನಪಿಸಿತು.

ನಿನ್ನ ನೀನು ಹಿರಿಯನೆಂದು ಹಿಗ್ಗದಿರು ।<br>
ಅನ್ಯರತ್ತ ಒಮ್ಮೆ ನೋಡಿ ಅವಿತಿರು ।<br>
ನಿನ್ನನಿತ್ತ ದೇವನನ್ನು ಮರೆಯದಿರು ।<br>
ಬೆನ್ನ ಹಿಂದಿಟ್ಟುದೇಕೆ ತಟ್ಟಲಿರಲಿ – ಮುಟ್ಟಲಾಗದಂತೆ ॥ ಲಂಚಾವತಾರಿ ॥

❑

## ಅಮರನಾಥ ಗೌಡ



ಸಿ. ಸೋಮಶೇಖರ ಅಂದರೆ ಸ್ನೇಹ, ಪ್ರೀತಿ, ವಿಶ್ವಾಸಕ್ಕೆ ಮತ್ತೊಂದು ಹೆಸರು. ಇದನ್ನು ನಾನು ಬಹಳ ವರ್ಷದಿಂದ ನಿರಂತರವಾಗಿ ಅನುಭವಿಸಿಕೊಂಡು ಬಂದಿದ್ದೀನಿ. ಒಂದು ಸಾರಿ ಇಷ್ಟಪಟ್ಟುಬಿಟ್ಟರೆ ತೀರಿತು, ಅಷ್ಟು ಸುಲಭವಾಗಿ ಅವರು ಸ್ನೇಹವನ್ನು ಬಿಡೋದಿಲ್ಲ. ಅವರ ಸಂಪರ್ಕದಲ್ಲಿ ನಾವೆಲ್ಲಾ ಅನುಭವಿಸುವ ಸಂತೋಷವನ್ನು ಮಾತುಗಳಲ್ಲಿ ವಿವರಿಸುವುದು ಅಸಾಧ್ಯ. 1975ರಲ್ಲಿ ನಾನು ವಿಶ್ವೇಶ್ವರಪುರಂ 'ಲಾ' ಕಾಲೇಜಿನಲ್ಲಿ ಓದುತ್ತಿದ್ದಾಗ ಅಲ್ಲಿನ ಲಲಿತಕಲಾ ಸಂಘ ಮತ್ತು ಕನ್ನಡ ಕೂಟಕ್ಕೆ ಕಾರ್ಯದರ್ಶಿಯಾಗಿದ್ದೆ. ತುಂಬಾ ಒಳ್ಳೊಳ್ಳೆ ಕಾರ್ಯಕ್ರಮ ಏರ್ಪಡಿಸುತ್ತಿದ್ದೆವು. ಅದರಲ್ಲಿ ಚರ್ಚಾಸ್ಪರ್ಧೆಯೂ ಒಂದು. ಆಗ ಎಲ್ಲಾ ಕಡೆ ಅಂತರ ಕಾಲೇಜು ಚರ್ಚಾಸ್ಪರ್ಧೆ ನಡೀತಿತ್ತು. ನಮ್ಮ ಕಾಲೇಜಿನಲ್ಲೂ ಬಹಳ ಒಳ್ಳೆಯ ತಂಡವಿತ್ತು. ಸೆಂಟ್ರಲ್ ಕಾಲೇಜಿನಲ್ಲಿ ಎಂ.ಕಾಂ. ಓದುತ್ತಿದ್ದ ಸೋಮಶೇಖರ ನನಗೆ ಪರಿಚಯವಾಗಿದ್ದು ಇಂಥದ್ದೊಂದು ಚರ್ಚಾಸ್ಪರ್ಧೆಯ ಸಂದರ್ಭದಲ್ಲಿ. ಆಗಿನಿಂದಲೂ ಇವರು ಬಹುದೊಡ್ಡ ಚರ್ಚಾಪಟು. ಪರಿಣಾಮಕಾರಿಯಾಗಿ ಮಾತಾಡುತ್ತಿದ್ದರು.

ಇವರೆಲ್ಲರ ಮಾತಿದೆ ಅಂದ್ರೆ ಅಕ್ಕಪಕ್ಕದ ಕಾಲೇಜಿನವರೆಲ್ಲಾ ಬರ್‍ತಾ ಇದ್ದರು. ವಾಜಪೇಯಿ ಮಾತಾಡ್ತಾರೆ ಅಂದರೆ ಕಾಂಗ್ರೆಸ್‌ನವರೂನೂ ಬಂದು ಕೇಳೋದಿಲ್ವೆ ಹಾಗೆ. ಗುಂಡುರಾವ್, ಮಲ್ಲೇಶ್ವಯ್ಯ, ಸಿದ್ದಲಿಂಗಯ್ಯ ಹೀಗೆಲ್ಲಾ ತುಂಬಾ ಜನ ಇರುತ್ತಿದ್ದರು. ಯಾರು ಗೆಲ್ಲುತ್ತಾರೆ ಅನ್ನೋದು ಬಹುದೊಡ್ಡ ಸವಾಲಾಗಿರುತ್ತಿತ್ತು. ಇವರ ಮಾತುಗಾರಿಕೆ, ವಿಷಯ ಪ್ರತಿಪಾದನೆ, ನಿರರ್ಗಳವಾದ ಅರಿವು, ಎತ್ತರಿಸಿದ ಕಂಠ ಕೇಳಿದವರಿಗೆ ಬಹುಕಾಲ ಈ ನೆನಪು ಮನಸ್ಸಿನಲ್ಲಿ ಇರುತ್ತಿತ್ತು.

❑

ಸ್ಥಾಪನೆ:1991

# ಬಸವ ವೇದಿಕೆ

ಬೆಂಗಳೂರು

ಬೆಂಗಳೂರಿನ ವಿಚಾರವಂತ ಸಹೃದಯಿಗಳು ಬಸವಾದಿ ಶರಣರ ವಿಚಾರಗಳನ್ನು ಅರಿತುಕೊಂಡು, ಅವುಗಳನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಪ್ರಚಾರ ಮಾಡಲು ಒಂದು ಸಂಘಟನೆಯ ಅಗತ್ಯವನ್ನು ಮನಗಂಡರು. ತ್ರಿಕಾಲಾಬಾಧಿತವಾದ ಶರಣರ ಮೌಲ್ಯಗಳನ್ನು ಜನರಿಗೆ ಮುಟ್ಟಿಸುವ ಉದ್ದೇಶವನ್ನು ರೂಪಿಸಿಕೊಂಡರು. ಶರಣರ ವೈಚಾರಿಕ ಹಾಗೂ ಜಾಗೃತ ಮನೋಭಾವ ಹೊಂದಿದವರನ್ನು, ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತಿರುವ ಮಹನೀಯರನ್ನು ಗುರುತಿಸಿ ಬಸವ ಜಯಂತಿ ಆಚರಣೆಯ ಸಮಾರಂಭದಲ್ಲಿ ಗೌರವಿಸುವ ಒಂದು ವಿನಮ್ರ ಪ್ರಯತ್ನವು ಬಸವ ವೇದಿಕೆ ಆಶ್ರಯದಲ್ಲಿ ಅತ್ಯಂತ ಯಶಸ್ವಿಯಾಗಿ ಮುಂದುವರೆದುಕೊಂಡು ಬರುತ್ತಿದೆ.

ಬಸವಣ್ಣನವರೇ ಮೊದಲಾದ ಶರಣರ ವಿಚಾರಧಾರೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ದಿಟ್ಟ ಮಾರ್ಗವನ್ನು ಹಾಗೂ ಪ್ರಯತ್ನಶೀಲ ಹೆಜ್ಜೆ ಗುರುತುಗಳನ್ನು ಬಸವ ವೇದಿಕೆಯು ದಾಖಲಿಸುತ್ತಿದೆ.

ಶರಣರ ಸತ್ಯ ಶುದ್ಧ ಸಂದೇಶಗಳ ಪರಿಪಾಲನೆಯ ಸಾಧನೆಗಾಗಿ ಬಸವ ವೇದಿಕೆಯು ಶರಣ ಸಂಸ್ಕೃತಿಯ ಒಂದು ಕ್ರಿಯಾತ್ಮಕ ಚಲನಶೀಲ ಸಂಸ್ಥೆಯಾಗಿ 1991ರಲ್ಲಿ ಸ್ಥಾಪನೆಗೊಂಡಿತು. ಈ ವೇದಿಕೆಯ ಸ್ಥಾಪನೆ, ಕಾರ್ಯಯೋಜನೆಗಳ ಪರಿಕಲ್ಪನೆ ಮೂಡಿದ್ದು ಸಾಹಿತಿ, ಉನ್ನತ ಐಎಎಸ್ ಅಧಿಕಾರಿ, ಜನಪ್ರಿಯ ವಾಗ್ಮಿ, ವಚನದಲ್ಲಿ ಅದ್ದಿದ ಮನಸ್ಸುಳ್ಳ ಡಾ. ಸಿ. ಸೋಮಶೇಖರ ಅವರಿಂದ. ಬೆಂಗಳೂರಿನಲ್ಲಿ ಬಸವ ಜಯಂತಿ ಆಚರಣೆಗೆ ಒಂದು ವಿಸ್ತೃತವಾದ ವಿಶಾಲತೆಯನ್ನು ಒದಗಿಸಿರುವ ಹೆಮ್ಮೆ ಇವರಿಗೆ ಹಾಗೂ ಬಸವ ವೇದಿಕೆಗೆ ಸಲ್ಲುತ್ತದೆ.

ಡಾ. ಸಿ. ಸೋಮಶೇಖರ ಅವರು ಮಂಡಿಸಿರುವ ಮಹಾ ಪ್ರಬಂಧ 'ವಚನಗಳಲ್ಲಿ ಸಾಮಾಜಿಕ ಚಿಂತನೆ'ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಡಿಲಿಟ್ ಪದವಿಯನ್ನು ಪ್ರದಾನ ಮಾಡಿದೆ. ವಚನ ಸಾಹಿತ್ಯವು ಅವರ ಬದುಕಿನ ನಡೆ–ನುಡಿಗಳಲ್ಲಿ ಹಾಸು ಹೊಕ್ಕಾಗಿರುವುದನ್ನು ಸಹ ನಾವು ಗುರುತಿಸಬಹುದಾಗಿದೆ. ವಚನ ಸಾಹಿತ್ಯದ ಪ್ರಚಾರ ಕಾರ್ಯವು ಅವರಿಂದ ನಿರಂತರವಾಗಿ ನಡೆಯುತ್ತಿದೆ. ತಮ್ಮ ಅಧಿಕಾರದ ಅವಧಿಯಲ್ಲಿಯೇ ಸಾಹಿತ್ಯ ಚಿಂತನೆ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವರಿಗೆ ವಿಶೇಷ ಆಸಕ್ತಿ. ಅದರಲ್ಲಿಯೂ ವಿಶೇಷವಾಗಿ ವಚನಸಾಹಿತ್ಯದ ಬಗ್ಗೆ ಅವರು ನಡೆಸಿದ ದೀರ್ಘ ಅಧ್ಯಯನ ಹಾಗೂ ಅನುಭಾವದ ಫಲಶೃತಿಯೇ ಬಸವವೇದಿಕೆಯ ಸ್ಥಾಪನೆಗೆ ಮೂಲ ಪ್ರೇರಣೆ.

ಬಸವ ವೇದಿಕೆ ನಡೆಸುವ ಕಾರ್ಯಕ್ರಮಗಳು ತಮ್ಮ ವೈಭವಕ್ಕೆ ಹಾಗೂ ಅರ್ಥಪೂರ್ಣತೆಗೆ ಪ್ರಸಿದ್ಧಿಯಾಗಿವೆ. ಬೆಂಗಳೂರಿನಲ್ಲಿ ಪ್ರತಿವರ್ಷವೂ ನಡೆಯುತ್ತಿರುವ ಕಾರ್ಯಕ್ರಮಗಳು ಜನಮಾನಸದಲ್ಲಿ ಸವಿನೆನಪಿನ ಅಚ್ಚೊತ್ತುತ್ತಾ ಬಂದಿವೆ. ಸಮಾರಂಭಗಳಲ್ಲಿನ ಅಚ್ಚುಕಟ್ಟುತನ, ಭಾಗವಹಿಸುವ ಪ್ರಖ್ಯಾತ ಸಾಹಿತಿಗಳು, ಕಲಾವಿದರು, ಹಿರಿಯ ಮುತ್ಸದ್ದಿಗಳು ಸಭೆ–ಸಮಾರಂಭಗಳ ಗಾಂಭೀರ್ಯವನ್ನು ಹೆಚ್ಚಿಸಿದ್ದಾರೆ, ತಮ್ಮ ಅಪಾರ ಮೆಚ್ಚುಗೆಯನ್ನು ಸೂಚಿಸಿ ಪ್ರೋತ್ಸಾಹಿಸಿದ್ದಾರೆ. ಸಾಂಸ್ಕೃತಿಕ ವಿಶಿಷ್ಟ ಕಾರ್ಯಕ್ರಮಗಳು ಪದೇ ಪದೇ ಮೆಲುಕು ಹಾಕುವಂತೆ ಎಲ್ಲರ ನೆನಪಿನಲ್ಲಿ ಉಳಿದುಕೊಂಡಿವೆ.

ಬಸವ ವೇದಿಕೆಯು ತನ್ನ ಬಹುಮುಖ್ಯ ಆಶಯದಂತೆ 1996ರಿಂದ ನಾಡಿನ ಸೇವಾ ಗಣ್ಯರಿಗೆ 'ಬಸವಶ್ರೀ' ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ. 1997ರಿಂದ ಶರಣ ಸಾಹಿತ್ಯ, ಸಂಸ್ಕೃತಿಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗಣ್ಯಾತಿಗಣ್ಯರನ್ನು ಗುರುತಿಸಿ 'ವಚನಸಾಹಿತ್ಯಶ್ರೀ' ಪ್ರಶಸ್ತಿಯನ್ನೂ ನೀಡಲು ತನ್ನ ಸಂಪ್ರದಾಯವನ್ನು ಇಮ್ಮಡಿಗೊಳಿಸಿಕೊಂಡಿದೆ.

ಇಂದಿನ ಆಧುನಿಕ ಬದುಕು ಎದುರಿಸುತ್ತಿರುವ ಮೌಢ್ಯ ಹಾಗೂ ಸ್ವಾರ್ಥತೆಯನ್ನು ಪ್ರತಿರೋಧಿಸಲು ಬೇಕಾದ ಉತ್ತರ ಮತ್ತು ಸ್ಥೈರ್ಯಗಳನ್ನು ತುಂಬಿಕೊಡುವ ಮಾರ್ಗದಲ್ಲಿ ಬಸವ ವೇದಿಕೆಯು ನಿರಂತರವಾಗಿ ಪ್ರಯತ್ನಿಸುತ್ತಿದೆ.

❑

## 'ಬಸವಶ್ರೀ'-1996

ಪ್ರಪ್ರಥಮ ಪ್ರಶಸ್ತಿ ಪುರಸ್ಕೃತರು

**ಡಾ. ಬಿ.ಡಿ. ಜತ್ತಿಯವರು**








28

'ಬಸವಶ್ರೀ'-1997

ಶ್ರೀ ಎಸ್. ನಿಜಲಿಂಗಪ್ಪನವರು







'ವಚನ ಸಾಹಿತ್ಯಶ್ರೀ'-1997

ಡಾ. ಸಿ.ಪಿ. ಕೃಷ್ಣಕುಮಾರ್‌ರವರು


29

## ‘ಬಸವಶ್ರೀ’-1998
ಡಾ. ಎಂ.ಸಿ. ಮೋದಿಯವರು








## ‘ವಚನ ಸಾಹಿತ್ಯಶ್ರೀ’-1998
ಡಾ. ಎಸ್. ವಿದ್ಯಾಶಂಕರ್‌ರವರು

'ಬಸವಶ್ರೀ'-1999
ಶ್ರೀ ಕೆ.ಎಂ. ನಂಜಪ್ಪನವರು









'ವಚನ ಸಾಹಿತ್ಯಶ್ರೀ'-1999
ಡಾ. ಎಂ. ಚಿದಾನಂದಮೂರ್ತಿಯವರು

'ಬಸವಶ್ರೀ'-2000

ಡಾ. ದೇ. ಜವರೇಗೌಡರವರು







'ವಚನ ಸಾಹಿತ್ಯಶ್ರೀ'-2000

ಪ್ರೊ. ಟಿ.ಆರ್. ಮಹಾದೇವಯ್ಯನವರು

ವಿದ್ವಾನ್ ಎಂ. ಶಿವಕುಮಾರಸ್ವಾಮಿಯವರು

‘ಬಸವಶ್ರೀ’-2001
ಡಾ. ಎಚ್. ನರಸಿಂಹಯ್ಯನವರು







‘ವಚನ ಸಾಹಿತ್ಯಶ್ರೀ’-2001
ಡಾ. ಎಸ್.ಆರ್. ಗುಂಜಾಳ್‌ರವರು

## ‘ಬಸವಶ್ರೀ’-2002
ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ್‌ರವರು








## ‘ವಚನ ಸಾಹಿತ್ಯಶ್ರೀ’-2002
ಶ್ರೀ ರಂಜಾನ್ ದರ್ಗಾರವರು

## ‘ಬಸವಶ್ರೀ’-2003
ಡಾ. ಚಂದ್ರಶೇಖರ ಕಂಬಾರ







## ‘ವಚನ ಸಾಹಿತ್ಯಶ್ರೀ’-2003
ಡಾ. ಶೈಲಜಾ ಉಡಚಣರವರು

## ‘ಬಸವಶ್ರೀ’-200[illegible]

ಡಾ. [illegible]








## ‘ವಚನ ಸಾಹಿತ್ಯಶ್ರೀ’-2004

ಡಾ. ಸಾ.ಶಿ. ಮರುಳಯ್ಯನವರು

## 'ಬಸವಶ್ರೀ'-2005
ಡಾ. ಪಾಟೀಲ ಪುಟ್ಟಪ್ಪನವರು







## 'ವಚನ ಸಾಹಿತ್ಯಶ್ರೀ'-2005
ಶ್ರೀ ಇಬ್ರಾಹೀಮ ನ. ಸುತಾರರವರು

## ‘ಬಸವಶ್ರೀ’-2006
ನ್ಯಾಯಮೂರ್ತಿ ಡಾ. ವಿ.ಎಸ್. ಮಳಿಮಠರವರು







## ‘ವಚನ ಸಾಹಿತ್ಯಶ್ರೀ’-2006
ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು
ಡಾ. ಅಜಯ ಕುಮಾರ ಸಿಂಹರವರು

## ‘ಬಸವಶ್ರೀ’-2007

**ಪದ್ಮಶ್ರೀ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂರವರು**







## ‘ವಚನ ಸಾಹಿತ್ಯಶ್ರೀ’-2007

**ವಾಙ್ಮಯ ತಪಸ್ವಿ ಶ್ರೀ ಕುಮಾರ ನಿಜಗುಣರವರು**

## ‘ಬಸವಶ್ರೀ’-2008
ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರು







## ‘ವಚನ ಸಾಹಿತ್ಯಶ್ರೀ’-2008
ಡಾ. ಜಯಶ್ರೀ ದಂಡೆಯವರು

'ಬಸವಶ್ರೀ'-2009
ಡಾ. ವೀರೇಂದ್ರ ಹೆಗ್ಗಡೆಯವರು








'ವಚನ ಸಾಹಿತ್ಯಶ್ರೀ'-2009
ಪಂ. ವೆಂಕಟೇಶ ಕುಮಾರ್‌ರವರು

## 'ಬಸವಶ್ರೀ'-2010
ಡಾ. ಸುಧಾಮೂರ್ತಿಯವರು







## 'ವಚನ ಸಾಹಿತ್ಯಶ್ರೀ'-2010
ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯವರು

## ‘ಬಸವಶ್ರೀ’-2011
### ನಾಡೋಜ ಏಣಗಿ ಬಾಳಪ್ಪನವರು







## ‘ವಚನ ಸಾಹಿತ್ಯಶ್ರೀ’-2011
### ಡಾ. ವೀಣಾ ಬನ್ನಂಜೆಯವರು

## ‘ಬಸವಶ್ರೀ’-2012
### ನಾಡೋಜ ಡಾ. ಚನ್ನವೀರ ಕಣವಿಯವರು





## ‘ವಚನ ಸಾಹಿತ್ಯಶ್ರೀ’-2012
### ಶ್ರೀಮತಿ ಕಸ್ತೂರಿ ಶಂಕರ್‌ರವರು



## 'ಬಸವಶ್ರೀ'-2013

ಡಾ. ಎಂ.ಎಂ. ಕಲಬುರ್ಗಿಯವರು







## 'ವಚನ ಸಾಹಿತ್ಯಶ್ರೀ'-2013

ಡಾ. ಜಿ.ವಿ. ಜಯಾ ರಾಜಶೇಖರ್‌ರವರು

## 'ಬಸವಶ್ರೀ'-2014

### ಭಾರತ ರತ್ನ ಡಾ. ಸಿ.ಎನ್.ಆರ್. ರಾವ್







'ವಚನಸಾಹಿತ್ಯಶ್ರೀ'-2014

ಡಾ. ಲತಾ ರಾಜಶೇಖರ್

'ವಚನ ಸಾಹಿತ್ಯಶ್ರೀ'-2014

ಡಾ. ಆರ್. ಶಿವಣ್ಣ





‘ಬಸವಶ್ರೀ’ ಹಾಗೂ ‘ವಚನಸಾಹಿತ್ಯಶ್ರೀ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಣ್ಯರು

‘ಬಸವಶ್ರೀ’-2015

ಡಾ. ಜಿ. ವೆಂಕಟಸುಬ್ಬಯ್ಯ







‘ವಚನ ಸಾಹಿತ್ಯಶ್ರೀ’-2015

ಶ್ರೀಮತಿ ಸಂಗೀತಾ ಕಟ್ಟಿ ಹಾಗೂ ಶ್ರೀ ಕೆ.ಸಿ. ಶಿವಪ್ಪ

# ನಾಡಿನ ವಿವಿಧ ಕ್ಷೇತ್ರಗಳ ಗಣ್ಯರೊಂದಿಗೆ

















ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಗುಂಡೂರಾವ್




ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್.ಆರ್. ಬೊಮ್ಮಾಯಿ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್. ಬಂಗಾರಪ್ಪ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಜೆ.ಹೆಚ್. ಪಟೇಲ್



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಧರ್ಮಸಿಂಗ್



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ



ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಸದಾನಂದ ಗೌಡ



ಡಾ. ಎಸ್. ಜಾನಕಿ



ಡಾ. ಪಿ.ಬಿ. ಶ್ರೀನಿವಾಸ್



ಡಾ. ಎಸ್.ಪಿ. ಬಾಲಸುಬ್ರಮಣ್ಯಂ



ಡಾ. ಕೆ.ಜೆ. ಯೇಸುದಾಸ್




ಡಾ. ಶಿವಮೊಗ್ಗ ಸುಬ್ಬಣ್ಣ



ಡಾ. ಸಿ. ಅಶ್ವಥ್



ಶ್ರೀಮತಿ ವಾಣಿ ಜಯರಾಂ



ಶ್ರೀ ಜಿ.ವಿ. ಅಯ್ಯರ್



ಶ್ರೀ ಜಿ. ಉದಯಶಂಕರ್



ಶ್ರೀ ಆರ್.ಎನ್. ಜಯಗೋಪಾಲ್ ಮತ್ತು ಶ್ರೀ ಗೀತಪ್ರಿಯ



ನ್ಯಾ. ಶ್ರೀ ನಿಟ್ಟೂರು ಶ್ರೀನಿವಾಸರಾವ್



ಶ್ರೀ ಮತ್ತೂರು ಕೃಷ್ಣಮೂರ್ತಿ



ಡಾ. ಹೆಚ್. ನರಸಿಂಹಯ್ಯ



ಡಾ. ಹೆಚ್.ಎಸ್. ದೊರೆಸ್ವಾಮಿ



ಶ್ರೀ ವಿಷ್ಣುವರ್ಧನ್, ಶ್ರೀಮತಿ ಜಯಮಾಲ



ಶ್ರೀ ಅಂಬರೀಶ್



ಶ್ರೀ ಶ್ರೀನಾಥ್



ಶ್ರೀ ಅನಂತನಾಗ್



ಯೋಗಗುರು ಬಾಬಾ ರಾಮದೇವ್



ಯೋಗಗುರು ಬಿ.ಕೆ.ಎಸ್. ಐಯ್ಯಂಗಾರ್



ಡಾ. ವೀರೇಂದ್ರ ಹೆಗಡೆ



ಶ್ರೀ ರವಿಶಂಕರ ಗುರೂಜಿ


ಪ್ರಧಾನಿ ಸನ್ಮಾನ್ಯ ಶ್ರೀ ರಾಜೀವ್‌ಗಾಂಧಿ


ರಾಷ್ಟ್ರಪತಿ ಸನ್ಮಾನ್ಯ ಶ್ರೀ ಗ್ಯಾನಿ ಜೇಲ್‌ಸಿಂಗ್


ರಾಷ್ಟ್ರಪತಿ ಸನ್ಮಾನ್ಯ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ



ರಾಷ್ಟ್ರಪತಿ ಸನ್ಮಾನ್ಯ ಶ್ರೀ ಪ್ರಣಬ್ ಮುಖರ್ಜಿ



ರಾಜ್ಯಪಾಲ ಸನ್ಮಾನ್ಯ ಶ್ರೀ ಹನ್ಸರಾಜ್ ಭಾರದ್ವಾಜ್



ರಾಜ್ಯಪಾಲ ಸನ್ಮಾನ್ಯ ಶ್ರೀ ವಜುಭಾಯಿ ವಾಲಾ



ರಾಜ್ಯಪಾಲ ಸನ್ಮಾನ್ಯ ಶ್ರೀ ಟಿ.ಎನ್. ಚತುರ್ವೇದಿ



ರಾಜ್ಯಪಾಲ ಸನ್ಮಾನ್ಯ ಶ್ರೀ ರಾಮೇಶ್ವರ್ ಠಾಕೂರ್











**ವಚನಗಳಲ್ಲಿ ಸಾಮಾಜಿಕ ಚಿಂತನೆ ಪುಸ್ತಕ ಬಿಡುಗಡೆ ಸಮಾರಂಭ 2004**







ವಚನಗಳಲ್ಲಿ ಸಾಮಾಜಿಕ ಚಿಂತನೆ ದ್ವಿತೀಯ ಆವೃತ್ತಿಯ ಪುಸ್ತಕ ಬಿಡುಗಡೆ ಸಮಾರಂಭ 2015









ಡಾ. ಸಿ.ಸೋಮಶೇಖರ – ಶ್ರೀಮತಿ ಎನ್.ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ(ರಿ) ಉದ್ಘಾಟನೆ ಮತ್ತು ಸಂಸ್ಕೃತಿ ಸಂಗಮ ಪ್ರಶಸ್ತಿ ಪ್ರದಾನ ಸಮಾರಂಭ



ಶ್ರೀ ಹಂಸಲೇಖ



ಶ್ರೀ ರಾಜೇಶ್‌ಕೃಷ್ಣನ್



ಶ್ರೀಮತಿ ಮಾಲ್ಗುಡಿ ಶುಭ



ಶ್ರೀ ರಘುದೀಕ್ಷಿತ್






ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನ

## ಅಭಿನಂದನಾ ಸಮಾರಂಭದ ಚಿತ್ರಗಳು











## PROFILE of


**Dr. C. Somasekhara,** IAS (r)
#10, 21st Cross, 3rd Block, 4th Stage
Basaveshwara Nagar, Bangalore - 560 079
Res: 080-23118199, Mobile:9880191228
Email: drcsomasekhara9@gmail.com


- Born on 9th August 1954 at Hoskote, Bangalore Distrist.
- 1973 : Passed B.Com in 1st Class
- 1975 : Passed M.Com in 1st Class from Bangalore University
- Participated in hundreds of Debates, Speeches & Essay writing competitions and excelled with distinctions and awards during the student days.
- 1975-78 : Started the career as commerce lecturer at the reputed S. Nijalingappa College in Bangalore.
- 1979-82 : Appointed as the Asst. Director in the Dept. of Youth Services, Govt. of Karnataka.
- 1980 : Appeared for civil service and selected as Asst. collector of customs from UPSC.
- Honour of being the first candidate to write the entire exam of UPSC in the mother tongue - Kannada Language and selected as Assistant collector, Customs.
- Denied to join the central service with the love for the land Karnataka and language Kannada.
- 1982 : Passed the Karnataka Administrate Services Exam and entered into state services as class I cadre- Asst. Commissioner with distinction.
- 1982-84 : Probationer as Asst. Commissioner at Dharwad.
- 1984-86 : Appointed as Deputy Director in the Department of Food and Civil Supplies at Dharwad Dist.
- 1985 : Participated in the All India Kannada Literary conference at Dharwad. Presented an essay- Kannada in Administration' and received good appreciations.
- Since beginning evinced a lot of interest in Kannada Literature, Culture, Dramas and Music
- 1986 : First authored Collection of literary articles in Kannada- `Chinthana Chilume' released at Dharwad.
- 1986-89 : Served as the Asst. Commissioner and Sub Divisional magistrate in Mangalore, Sub Divisional at Dakshina Kannada District.
- 1989-90 : Served as the Administrative officer, Directorate of Economics and statistics Bangalore.
- 1990-91 : Served as the Secretary, Karnataka Housing Board.
- 1991-95 : Served as the Special Deputy Commissioner (Dev.) and Ex-Officio project Director for Dist Rural Development Board, Bangalore Urban Dist.
- 1995 : Served as the Secretary, Karnataka Slum Clearance Board.
- 1996 : Authored, collection of Essay “Chintana Kirana”.
- 1997-99 : Served as the Special Deputy Commissioner

(Revenue) Bangalore urban District & Additional District magistrate.

- 2000 : Served as the Secretary, Karnataka Development Authority.
- 2002-03 : Served as the Director, Kannada and Culture Dept.
- 2003-04 : Served as the Chief Executive officer, Bangalore Rural Zilla Panchayath
- 2004 : Presented the thesis : `Vachangalalli Samajika Chintane' (The Social thoughts in Vachana literature) and got the D.lit from the prestigious Kannada University, Hampi.
- 2004-06 : Served as the Managing Director, Karnataka State Warehousing Corporation.
- On 1.2.2007 Promoted to the Indian Administrative Service.
- 2007 : Served as the Director, Karnataka Tourism, Government of Karnataka.
- 2008-12 : Served as the Deputy Commissioner, Tumkur Dist. for 3 years, 6 months and responsible for many innovative development programs.
- 2012-13 : Served as the Director, Karnataka State Agricultural Marketing Department.
- 2013 : Served as the Commissioner of Excise.
- 1.1.2013 : Promoted to the Supertime Scale in IAS and Continued as the Commissioner of Excise.
- 2013 : Served as the Secretary, Dept. of Youth Services.
- 2013 : Served as the Managing Director, Karnataka State small Industries Development Corporation Ltd.
- 2013 : Secretary, co-operation Department, Government of Karnataka.
- 2014 : Retired from Government Service.
- 2015 Started Dr.C.Somasekhara Sarvamangala trust awarded Dasa Sri award to Bannanje Govinda Charya, Vachana award to Go.Ru. Channabasappa, Janapada award to Lakkappa Gowda, Sangeetha award to H.R.Leelavathi.
- Presently nominated by the Government of Karnataka as vice president of India Red Cross Society Karnataka branch.

## Literary and Cultural Excellence

- Participated in Hundreds of Debates and Essay Competitions during the Student days.
- Presently acclaimed as one of the Best speakers of the state.
- Interviewed various senior cultural and literary dignitaries for Doordarshan.
- Organized and participated in the Republic Day and Independence Day Celebrations for several years under various capacities. Acclaimed as one of the Best organizers of State, National & International Conferences.

- Acted in several Dramas, Serials and Cultural events on Doordrashan.
- Served as the president of KAS officers Association during 1998-99.
- Established in the year 1991, Presently, Executive president of Basava Vedike which has instituted the prestigious "Basavashri" and "Basava Shaithyashri" awards.
- Worked as the executive president of the renowned film lyric writter Chi. Udayashankara Awards Committee.
- Presided over the prestigious Taluk Kannada Sahithya Conference at Hoskote in 2004.
- 2007 - Presided over Bangalore district Sharana Sahithya Sammellana.
- 2007 - Authored a collection of Essay's "Chintana Chethana"
- Presided over the District Kannada Literary Conference held at Vijayapur.
- Organized a mammoth Tumkur District Utsav with the participation of national level Artists and Dignitaries for the first time in the history of Tumkur Dist., The Artist partricipated are Smt. Hemamalini, S.P. Balasubramanyam, Usha Uttappa, Vasundara Das, Shubha Malgudi, Shobana, Kavitha Krishnamurthy and others National & International fame Artists. Acclaimed as Culture Ambassador.

## Awards

- PRCI Chanakya Awards 2014 For "Excellence in PUBLIC ADMINISTRATION"
- "Udhayabhanu Suvarna Palanubhavi Rathna 2016" by Udhayabhanu Kala Sanga (R).
- Rashtriya Bhooshana Rashtra Prashasti 2014 by Akhila Bharatha Kannada Pathrika Sampadakara Okkoota.
- "Rashtriya Kala Poshak Sanman–2015 by Natyatharanga 2015.
- Dvani Puraskara - Dhwani Puraskara Sharjah – UAE.
- "Karnataka Seva Ratna" by Bengalurina Akhila Bharatha Ahinda Shakthi Parishath.
- "Rashtra Chethana" by Bengalurina Bharathiya Lalithakala Samsthe.
- "Vishwamanya" by Abudhabi Kannada Sangha.
- "Rajiv Gandhi Shiromani" by New Delhi Antharrashtriya India International Friendship Society.
- Rashtriya Rathna" by New Delhi, Rashtriya Citizen Integration Peace Society.
- "Samaja Rathna" by Mumbai Karnataka Sangha.
- "Kayaka Seva Dhurani" by Mandyada Chandravana Ashramadinda 2011.
- "Karnataka Jyothi" by Bangarapete Kotilingeshwara Temple Trust.

- “Kannada Samskruthika Rayabhari” - Tumkur Citizens
- “Aadalitha Rathna” by Yashwanthpura Karnataka Rakshana Vedike.
- “Veerarajashri” by Belagavi Veeradharma Samsthana Peeta.
- “Karnataka Chethana” by Bengalurina Gnanamandaara Academy.
- “Kuvempu Rathna” by Bengalurina Rajya Okkaligara Mithrakoota.
- “Anikethana” by Bengalurina Kuvempu Kala Nikethana.
- “Gowthama” by Bengalurina Rangothriyinda.
- “Natyashri” by Bengalurina Natyashri Kala Thandadinda.
- “Karnataka Navarathna” by Bengalurina Bharatha Yuva Kendhradinda.
- Shri Guru Sri Prashasthi , shivmoggada Anandapur Mutt, Shimoga.
- ”Basavashri” by Sharana Mandali, Mysore 2012.
- “Sahithya Sri” award from Kolada Mut
- “Vachana Vachaspathi” award from Vachana Parishath
- “Sharana Sri” Prasasti Shakuntala Jayadeva Trust.
- ”Karnataka Shreshta Maanavarathna Shri Prashasthi”
- ”Rajiv Gandhi Shiromani Award” 2003.
- Sharana GnanaRathna Prashasthi – 2014 by Basavadharma Peeta 2014.
- ”Kannada Saamskruthika Rayabhari Prashasthi” by Kannada Karnataka Rakshana Vedhike.
- ”Baratha Vikasa Rathna Rashtra Prashasthi” by Survey Cultural Academy (R) 2013
- Arya Bhat Prashasthi

Many more such literary awards

## Participation in International Conferences :

- 2003 : World `Akka' Conference, Detroit, USA.
- 2004 : International Federation of warehousing Association. London, U.K.
- 2005 : IFWA Conference, China
- 2006 : IFWA Conference, Latvia
- 2007 : Word Tourism Conference, London, U.K.
- 2009 : Chief guest at the Kannada Conference, Dubai.
- 2010 : Special lecture delivered on 'The universal message of Sharanas to the world' at Boston, USA.

Acclaimed as a distinguished administrator, orator and literary personality and has delivered hundreds of lectures on various subjects throughout the state, country and abroad. Known for great organizing skills and is acknowledged as an able administrator with a human touch and excellent public relations.